ನಿಂಗಯ್ಯ ಸ್ವಾಮಿ ಪೂಜಾರಿ

ವ್ಯಕ್ತಿ ಪರಿಚಯ



ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು

ಡಾ. ಸಿ. ಕೆ. ನಾವಲಗಿ

ಜನಪ್ರಿಯ ಜಾನಪದ ಪುಸ್ತಕ ಮಾಲೆ - ೩೪

ನಿಂಗಯ್ಯ ಸ್ವಾಮಿ ಪೂಜಾರಿ

ಜನಪದ ರಂಗಕಲಾವಿದನ ವ್ಯಕ್ತಿ ಪರಿಚಯ

ಡಾ. ಸಿ.ಕೆ. ನಾವಲಗಿ
'ಚಿಂಬೆಳಗು', ವಿದ್ಯಾನಗರ, ಗೋಕಾಕ - 591 307
ಬೆಳಗಾವಿ ಜಿಲ್ಲೆ

ಕರ್ನಾಟಕ ಜಾನಪದ ಪರಿಷತ್ತು
ನಂ.1, ಜಲದರ್ಶಿನಿ ಲೇ ಔಟ್,
ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು - 560 054.

NINGAIAH SWAMY POOJARI -
A pen portrait - by Dr. C.K. NAVALAGI.
Published by : KARNATAKA JANAPADA PARISHATH.
No.1, Jaladarshini Layout, Near M.S. Ramaiah Hospital Gate,
New B.E.L. Road, Bangalore - 560 054.
Pages : 32 Price : Rs.10 2008.

ಪ್ರಥಮ ಮುದ್ರಣ ೨೦೦೮

ಪ್ರತಿಗಳು : ೨೦೦೦

ಪುಟಗಳು : ೩೨

ಬೆಲೆ : ರೂ. ೧೦ (ಹತ್ತು ರೂಪಾಯಿ)

ಮುದ್ರಕರು : ಕೃತಿಕ ಪ್ರಿಂಟ್–ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು – 560 030
ಮೊಬೈಲ್ – 98441 14958

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆಯೂ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ ಜನಪ್ರಿಯ ಜಾನಪದ ಪುಸ್ತಕ ಮಾಲೆಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ – ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ **ಡಾ. ಸಿ.ಕೆ. ನಾವಲಗಿ** ಅವರು **ನಿಂಗಯ್ಯ ಸ್ವಾಮಿ ಪೂಜಾರಿ** ಅವರನ್ನು ಕುರಿತ ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೧೭-೧೦-೨೦೦೮

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು


ನಿಂಗಯ್ಯ ಸ್ವಾಮಿ ಪೂಜಾರಿ

ಬೆಳಗಾವಿ ಜಿಲ್ಲೆಯ ಗೋಕಾಕ ಕನ್ನಡ ಜನಪದ ರಂಗಭೂಮಿಗೆ ತನ್ನದೇ ಬೆಲೆಯುಳ್ಳ ಕಾಣಿಕೆ ನೀಡಿದೆ. ಭಕ್ತ ಸಿರಿಯಾಳ, ನಿಜಗುಣಶಿವಯೋಗಿ, ಸತ್ಯವಾನ ಸಾವಿತ್ರಿ ಹಾಗೂ ಶ್ರೀ ಕೃಷ್ಣಪಾರಿಜಾತ ಗಳಂಥ ರಂಗಕಲೆಗಳ ಪ್ರದರ್ಶನಕ್ಕೆ ಗೋಕಾಕ ಪರಿಸರ ಹೆಸರುವಾಸಿ. ಗೋಕಾಕದ ಮಾರುತಿ ಮಾಸ್ತರ ತಟ್ಟೀಮನಿ ಅವರ 'ಸತ್ಯವಾನ ಸಾವಿತ್ರಿ' ಈ ಭಾಗದ ಸುಪ್ರಸಿದ್ಧ ರಂಗಕಲೆಯೆನಿಸಿದೆ. ಇದೇ ಭಾಗದ ಕೆಮ್ಮನಕೋಲ ಪಾರಿಜಾತ ಕಂಪೆನಿಯ ಕೃಷ್ಣಪಾತ್ರಧಾರಿ ಶ್ರೀ ಯಲ್ಲಪ್ಪ ಪೂಜೇರ ಅವರಿಂದ ಶ್ರೀ ಕೃಷ್ಣಪಾರಿಜಾತ ಸಾವಿರಾರು ಪ್ರಯೋಗಗಳ ಮೂಲಕ ಅತ್ಯಂತ ಜನಪ್ರಿಯವಾಗಿದೆ. ಅಂತೆಯೇ ಗೋಕಾಕದ ಹಿರಿಯ ಜನಪದ ರಂಗಕಲಾವಿದ ನಿಂಗಯ್ಯ ಸ್ವಾಮಿ ಪೂಜಾರಿ ಅವರಿಂದ ನಿಜಗುಣ ಶಿವಯೋಗಿ ಸಣ್ಣಾಟ ಈ ಪ್ರದೇಶದಲ್ಲಿ ತುಂಬ ಪ್ರಖ್ಯಾತಿಯನ್ನು ಪಡೆದಿದೆ. ಪೂಜಾರಿ ಅವರು ನಟನಾಕಲೆಯನ್ನೇ ತಮ್ಮ ಒಲವಿನ ಕಾರ್ಯಕ್ಷೇತ್ರವಾಗಿರಿಸಿಕೊಂಡು ಜನಪದ ರಂಗಭೂಮಿ ಕಲಾವಿದರಾಗಿಯೇ ಜನಮನೋರಂಗದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ಅಂತೆಯೇ ತಮ್ಮ ಬದುಕಿನ ಬಾಳಸಂಜೆ (73ನೇ ವರ್ಷ) ಯಲ್ಲಿಯೂ ನಮ್ಮ ಪಾರಂಪರಿಕ ಕಲೆ-ಸಂಸ್ಕೃತಿಗಳ ಉಳಿವಿಗಾಗಿ, ಬೆಳವಣಿಗೆಗಾಗಿ ಕುಣಿಯುತ್ತಲೇ ಇದ್ದರು. ಈ ಪರಿಪಕ್ವ ಜೀವಿಯ ರಂಗಾಭಿನಯವು ಅವರ ಪ್ರತಿಭೆ-ಪರಿಶ್ರಮಗಳ ಕುರುಹು. ಕಲೆಯ ಗೀಳಿನ ಬಾಳುವೆ ಸ್ವಾಮಿಗಳ ವ್ಯಕ್ತಿತ್ವ. ಹಾಗಾಗಿ, ತಮ್ಮ ಬಾಳಿನ ಬಹುಕಾಲವನ್ನು ಕಲೆಗಾಗಿಯೇ ಮುಡುಪಿಟ್ಟವರು. ನಿಂಗಯ್ಯ ಸ್ವಾಮಿಗಳ ಹೆಸರು ನಿರಂತರ

ಕೇಳುತ್ತಿರುವುದು, ಅವರು ಗೋಕಾಕನಗರ ಸಭೆಗೆ ಹಲವು ಬಾರಿ ಅಧ್ಯಕ್ಷರಾದುದರಿಂದಲ್ಲ, ಅವರ ಜನಪದ ರಂಗ ಕಲಾಪ್ರದರ್ಶನದಿಂದ. ನಿಜಗುಣ ಶಿವಯೋಗಿ ಸಣ್ಣಾಟದ 'ಪ್ರಮೀಳಾ' ಪಾತ್ರ ಪ್ರದರ್ಶನದ ಅದ್ವಿತೀಯ ಕಲಾವಿದರಾಗಿ ಮೆರೆದ ಸ್ವಾಮಿಗಳು, ಇಂದು ನಮ್ಮೊಂದಿಗಿಲ್ಲವಾದರೂ ದಿವ್ಯ ಜೀವಿಯಾಗಿ, ಮೇರುನಟರಾಗಿ ಅಮರರಾಗಿದ್ದಾರೆ.

ಬಾಲ್ಯಜೀವನ : ಗೋಕಾಕದ ಘಟಪ್ರಭೆಯ ದಡದ ಮೇಲಿನ ಅಂಬಿಗೇರ ಓಣಿಯ ಬಡಜಂಗಮ ಕುಟುಂಬವೊಂದರಲ್ಲಿ 10–04–1924ರಲ್ಲಿ ನಿಂಗಯ್ಯ ಸ್ವಾಮಿಗಳು ಜನಿಸಿದರು. ತಂದೆ ಸಂಗಯ್ಯ, ತಾಯಿ ನೀಲವ್ವ ಇವರ ದ್ವಿತೀಯ ಪುತ್ರ, ಹುಟ್ಟಿದ ಮೂರು ವರುಷಗಳಲ್ಲಿಯೇ ಹಡೆದವರನ್ನು ಕಳೆದುಕೊಂಡ ನತದೃಷ್ಟ. ತಂದೆ–ತಾಯಿಯ ಪ್ರೀತಿ ವಾತ್ಸಲ್ಯ; ಪಾಲನೆ–ಪೋಷಣೆಗಳಿಂದ ವಂಚಿತಗೊಂಡರು. ಅಜ್ಜಿ ಶಿವಲಿಂಗಮ್ಮನ ಆಶ್ರಯದ ಆಸರೆಯನ್ನು ನೆಮ್ಮಿಕೊಂಡು ಬೆಳೆದರು. ಜಾತಿಯಿಂದ ಜಂಗಮರಾದುದರಿಂದ ಶ್ರೀ ಸಂಗಮೇಶ್ವರ ದೇವರ ಪೂಜೆ ಮಾಡುತ್ತ, ಹಿಟ್ಟಿನ ಭಿಕ್ಷೆ ಬೇಡುತ್ತ, ದನಕರುಗಳನ್ನು ಮೇಯಿಸುತ್ತ ಅಣ್ಣ ಬಾಳಯ್ಯನೊಂದಿಗೆ ಅಜ್ಜಿಯ ಮನೆಯಲ್ಲಿ ಬಾಲಕ ನಿಂಗಯ್ಯ ಉಪಜೀವನ ಸಾಗಿಸತೊಡಗಿದನು. ಇದ್ದ ಅಲ್ಪ ಜಮೀನಿನಲ್ಲಿ ಕೃಷಿ ಕೆಲಸ ಕೂಡ ಮಾಡತೊಡಗಿದನು. ಬಾಲಕ ನಿಂಗಯ್ಯ ಸ್ವಾಮಿ ಕಷ್ಟಪಟ್ಟು ನಾಲ್ಕನೇ ಈಯತ್ತೆವರೆಗೆ ಓದಿದ. ಆರ್ಥಿಕ ಅಭದ್ರತೆಯಿಂದ ಓದು ನಿಲ್ಲಿಸಿದ. ತಿಂಗಳಿಗೆ ಚವಲಾ (ಎರಡಾಣೆ–12 ಪೈಸೆ) ಕೊಟ್ಟು ಕಲಿಯಲಾಗಲಿಲ್ಲ. ಹೊಟ್ಟೆ ಪಾಡಿಗಾಗಿ, 13ನೇ ವಯಸ್ಸಿನಲ್ಲಿಯೇ ಗೋಕಾಕದ ಮೋಟಾರ ಗ್ಯಾರೇಜೊಂದರಲ್ಲಿ ಕ್ಲೀನರ್ ಕೆಲಸಕ್ಕೆ ಸೇರಿಕೊಂಡು, 1947ರವರೆಗೆ ಅದೇ ಕೆಲಸದಲ್ಲಿದ್ದ. ಕೆಲಸದಲ್ಲಿ ಕ್ರಮೇಣ ಮೇಲೇರುತ್ತ,

ಮೆಕ್ಯಾನಿಕ್‌ನಾಗಿಯೂ ಮುಂದುವರಿದು, ವಾಹನ ಚಾಲಕನಾಗಿ, ಲೈಸನ್ಸ್ ಪಡೆದು ಶ್ರೀ ಮಹಾದೇವಪ್ಪ ಹತಪಾಕಿ ಅವರ ವಾಹನ ಚಾಲಕನಾಗಿ, ಗೋಕಾಕದ ಬೇರೆ ಬೇರೆ ಊರುಗಳಿಗೆ ಟ್ಯಾಕ್ಸಿ ಓಡಾಡಿಸಲಾರಂಭಿಸಿದ. ಇದು ಅವನ ಬಿಡುವಿಲ್ಲದ ದುಡಿಮೆಗೆ, ಕಾರ್ಯಕೌಶಲಕ್ಕೆ ದೊರೆತ ಪ್ರಮೋಶನ್ ಎಂದೇ ಹೇಳಬೇಕು. ಈ ಡ್ರೈವರ್ ಕೆಲಸದಿಂದ ಬಂದ ಆಯದಲ್ಲಿ ಜೀವನ ಸಾಗಿಸತೊಡಗಿದ. ಕೆಲಕಾಲನಂತರ ಅಜ್ಜಿ ಶಿವಲಿಂಗಮ್ಮ ವಿಧಿವಶಳಾದಳು. ಅಣ್ಣ ತಮ್ಮ ದುಃಖಿಸಿದರು. ಅತ್ತರು ಕರೆದರು. ಗೋವು ಸಾಕಿದರು, ಕೃಷಿ ಮಾಡಿದರು. ಹಾಲಿನ ವ್ಯಾಪಾರ ಮಾಡಿದರು. ಅಣ್ಣ ತಮ್ಮ ಹೇಗೋ ಬದುಕು ನೂಕಿದರು. ನಿಂಗಯ್ಯ ಕಿರಿತನದಲ್ಲಿಯೇ ಹಿರಿತನವನ್ನು ಆರಂಭಿಸಿದ. ತನ್ನೂರಲ್ಲಿ, ಹಳ್ಳಿಗಳಲ್ಲಿ ಬಡವರು, ದೀನರು ದಲಿತರು, ರೈತರು, ಕೂಲಿಕುಂಬಳಿಯವರು ಜಗಳ ಮಾಡಿಕೊಂಡರೆ, ಅದನ್ನು ಹಿರಿಯನಾಗಿ ಬಗೆಹರಿಸುತ್ತಿದ್ದ. ಅನ್ಯಾಯವನ್ನು ಸಹಿಸುತ್ತಿರಲಿಲ್ಲವಾದ್ದರಿಂದ ನ್ಯಾಯಕ್ಕಾಗಿ ಸಂಘಟನೆ ಮಾಡತೊಡಗಿದ. ನಾಯಕತ್ವದ ಗುಣಗಳುಳ್ಳವನಾಗಿದ್ದರಿಂದ, ಹುಡುಗರು ಇವನನ್ನು ಹಿಂಬಾಲಿಸತೊಡಗಿದರು. ಡ್ರೈವರ್, ಕೆಲಸ ಇದ್ದೇ ಇತ್ತು. ಆಗಲೇ ತನ್ನ ಓಣಿಯ ಗೆಳೆಯರ, ಹಿರಿಯರ ಒತ್ತಾಯಕ್ಕೆ ಮಣಿದು 'ಭಕ್ತಚಿಲ್ಲಾಳ' ಆಟದಲ್ಲಿ 'ಚಿಲ್ಲಾಳ' ಪಾತ್ರ ನಿರ್ವಹಿಸಿದ. ಇದು ನಿಂಗಯ್ಯ ಸ್ವಾಮಿಗಳು ಬಾಲಕನಿರುವಾಗ ಅಭಿನಯಿಸಿದ ಮೊದಲ ಆಟ. ಇದನ್ನು 'ಭಕ್ತ ಸಿರಿಯಾಳ' ಆಟವೆಂದೂ ಕರೆಯುತ್ತಾರೆ. ನಂತರ ಗೋಕಾಕದ ಶ್ರೀ ಸಣ್ಣಪ್ಪ ಗಡಕರಿ (ಸೂತ್ರಧಾರ=ಮಾಸ್ತರ=ಮಾಲೀಕ)ಯವರ 'ಶ್ರೀ ಬಲಭೀಮ ನಾಟ್ಯ ಸಂಘ' –ಅಂಬಿಗೇರ ಓಣಿ ಗೋಕಾಕ ಇದರ ಆಶ್ರಯದಲ್ಲಿ 1948–49ರ ಸುಮಾರಿನಲ್ಲಿ ಹಮ್ಮಿಕೊಂಡ 'ನಿಜಗುಣ ಶಿವಯೋಗಿ' ಸಣ್ಣಾಟದಲ್ಲಿ ಸೇರಿಕೊಂಡು 'ಪ್ರಮೀಳಾ' ಪಾತ್ರ



ನಿರ್ವಹಿಸಿದರು. ಇದೇ ತಂಡದ ಈ ಪಾತ್ರದಲ್ಲಿ ಕೊನೆಯವರೆಗೂ ಅಭಿನಯಿಸಿದರು. ಈ ಆಟದ ಪ್ರಯೋಗ ಒಂದಕ್ಕೆ ಅಂದು ರೂ.200.00 ಸಿಕ್ಕುತ್ತಿತ್ತು. ಸ್ವಾಮಿಗಳ ಪಾಲಿಗೆ ರೂ.15.00 ಬರುತ್ತಿತ್ತು. ಹೀಗೆ, ಬೇರೆ ಬೇರೆ ನಿಟ್ಟಿನಿಂದ ಬರುವ ಅಲ್ಪಸ್ವಲ್ಪ ಹಣದಿಂದ ಸ್ವಾಮಿಗಳು ಜೀವನ ನಿರ್ವಹಣೆಯನ್ನು ಮಾಡುತ್ತ ಬಂದರು. ಒಟ್ಟಿನಲ್ಲಿ ಬಾಲ್ಯದ ಜೀವನವನ್ನು ತುಂಬ ಕಷ್ಟದಿಂದಲೇ ಕಳೆದರು.

ಕೌಟುಂಬಿಕ ಜೀವನ : ತರುಣ ನಿಂಗಯ್ಯನವರು 'ಸಾವಿತ್ರಿ' ಯೊಂದಿಗೆ ಮದುವೆಯಾದರು. ಇವರ ಜೀವನದ ಎಲ್ಲ ಕಷ್ಟ-ಜವಾಬ್ದಾರಿಗಳನ್ನು ಇವರ ಪತ್ನಿ ಹೊತ್ತುಕೊಂಡು ನಿಭಾಯಿಸತೊಡಗಿದರು. ಇದರಿಂದ ಸ್ವಾಮಿಗಳು ನೆಮ್ಮದಿಯ ಉಸಿರುಬಿಟ್ಟರಲ್ಲದೆ, ಹುರುಪು-ಉತ್ಸಾಹದಿಂದ ತಮ್ಮ ಕಲಾಜೀವನ, ಸಾಮಾಜಿಕ ಸೇವೆ, ರಾಜಕೀಯ ಜೀವನ, ಸಾಹಿತ್ಯ-ಸಾಂಸ್ಕೃತಿಕ ಕೆಲಸ-ಕಾರ್ಯಗಳನ್ನು ಮುಂದುವರಿಸಿದರು. ಇವರಿಗೆ ಆರು ಜನ ಪುತ್ರರು. ಮೂವರು ಪುತ್ರಿಯರು. ಹಿರಿಯ ಮಗ ಸಂಗಯ್ಯ ಸರಕಾರಿ ಪ್ರೌಢಶಾಲೆಯ ಮುಖ್ಯಾಧ್ಯಾಪಕರು, ದ್ವಿತೀಯ ಪುತ್ರ ಸಿದ್ಧಯ್ಯ ವಕೀಲರು (ನಿಧನರಾಗಿದ್ದಾರೆ), ತೃತೀಯ ಪುತ್ರ ಶಂಕ್ರಯ್ಯ ಡಿ.ಸಿ.ಸಿ. ಬ್ಯಾಂಕ್ ಮ್ಯಾನೇಜರು, ನಾಲ್ಕನೆಯ ಮಗ ಸಿದ್ಧಲಿಂಗಯ್ಯ ಕಲಾವಿದ (ನಿಜಗುಣ ಪಾತ್ರಧಾರಿ-ಲಿಂಗೈಕ್ಯ) ಮತ್ತು ಕೃಷಿಕ, ಐದನೇ ಮಗ

ಅಶೋಕ ವಕೀಲಿ ಓದಿ, ಜೆ.ಡಿ.ಎಸ್. ಪಕ್ಷದಲ್ಲಿ ಜಿಲ್ಲಾಧ್ಯಕ್ಷರಾಗಿ ರಾಜಕೀಯದಲ್ಲಿದ್ದಾರೆ. ಕೊನೆಯವ ಶಿವಾನಂದ ಮನೆಯಲ್ಲಿರುತ್ತಾನೆ. ಶಿವಲಿಂಗವ್ವ, ನೀಲವ್ವ, ಮಹಾದೇವಿ–ಪುತ್ರಿಯರು ಗಂಡಂದಿರ ಮನೆಯಲ್ಲಿದ್ದಾರೆ. ನೀಲವ್ವನ ಮಗ ಮಹಾಂತೇಶ ನಿಜಗುಣಿ ಆಟದ ಮುಮ್ಮ್ಯಾಳದ ಕಲಾವಿದನಾಗಿ–ಸಂಘಟಿಕನಾಗಿ, ಸ್ವಾಮಿಗಳ ನಂತರ ಆಟದ ಪ್ರದರ್ಶನವನ್ನು ಮುಂದುವರೆಸಿದ್ದಾನೆ. ಸಿದ್ಧಲಿಂಗಯ್ಯನವರ ಮಗ ಪ್ರದೀಪ 'ನಿಜಗುಣಿ' ಪಾತ್ರ ಮಾಡುತ್ತಿದ್ದಾನೆ. ತಮ್ಮಜ್ಜನ ಈ ಆಟದ ಪರಂಪರೆಯನ್ನು ಮೊಮ್ಮಕ್ಕಳು ಮುನ್ನಡೆಸಿಕೊಂಡು ನಡೆದಿರುವುದು, ಅಜ್ಜನ ಮೇಲೆ ಪ್ರೀತಿ–ಒಂದೆಡೆಯಾದರೆ, ಅವರಿಗಿರುವ ಜನಪದ ರಂಗಭೂಮಿಯ ಮೇಲಿನ ಕಾಳಜಿ ಇನ್ನೊಂದೆಡೆಯಿದೆ. ಹಾಗಾಗಿಯೇ ಇಂದಿನ ಸಂಕೀರ್ಣ ಸಂದರ್ಭದಲ್ಲಿ ಈ ಆಟದ 'ಶ್ರೀ ಬಲಭೀಮ ಬಯಲಾಟ ನಾಟ್ಯ ಸಂಘ' ಕ್ಕೆ ಮರುಜೀವ ತುಂಬಿ, ಇದರ ಆಶ್ರಯದಲ್ಲಿ 'ನಿಜಗುಣಿ' ಆಟ ಆಡಲು ಎಲ್ಲ ಸಿದ್ಧತೆಯನ್ನು ಮನೆಯವರೇ ಮಾಡಿಕೊಂಡಿದ್ದಾನೆ. ಇದಕ್ಕೆ ಶ್ರೀ ಅಶೋಕ ಅವರ ನೆರವು–ಮಾರ್ಗದರ್ಶನ ಇದ್ದುದನ್ನು ಮರೆಯಲಾಗದು. ಶ್ರೀ ದುಂಡಯ್ಯ ಸ್ವಾಮಿಗಳೂ ಪ್ರಸ್ತುತ ಕಲಾವಿದರ ಸ್ಫೂರ್ತಿಚೇತನರಾಗಿದ್ದಾರೆ. ನಿಂಗಯ್ಯ ಸ್ವಾಮಿಗಳವರ ಕೌಟುಂಬಿಕ ಪರಿವಾರ ತುಂಬ ದೊಡ್ಡದಾಗಿ ಬೆಳೆದಿದೆ. ಇವರಿಗೆ ಸುಮಾರು 38 ಜನ ಮಕ್ಕಳು–ಮೊಮ್ಮಕ್ಕಳು ಇದ್ದಾರೆ.

ಜನಪರ ಹೋರಾಟ : ತರುಣ ನಿಂಗಯ್ಯಸ್ವಾಮಿಜಿ, ಅಂದಿನ (1967) ಶೋಷಿತ ಸಮಾಜವನ್ನು ಕಂಡು ನೊಂದುಕೊಂಡರು. ಮರುಗಿದರು. ಬಡವರ ಮೇಲಾಗುವ ದೌರ್ಜನ್ಯವನ್ನು ಕಂಡು ಸಿಡಿಮಿಡಿಗೊಂಡರು. ಸುಮ್ಮನೇ ಕುಳಿತುಕೊಳ್ಳಲಾಗದೆ, ಬಡವರ, ಕೂಲಿಕಾರರ, ಕಾರ್ಮಿಕರ ಏಳ್ಗೆಗಾಗಿ ಜನಪರ ಹೋರಾಟವನ್ನು ಆರಂಭಿಸಿದರು. ಅನ್ನ ಸತ್ಯಾಗ್ರಹ

ಕೂಡ ಮಾಡಿದರು. ಇವರ ಜನಪರ ಹೋರಾಟದಿಂದ ಬಡಬಗ್ಗರು ತಕ್ಕಮಟ್ಟಿಗೆ ಸುಧಾರಿಸಿಕೊಂಡರು. ಗೋಕಾಕ ಪ್ರದೇಶದಲ್ಲಿ ಮಳೆ ಬಾರದೆ ಬೆಳೆ ನಷ್ಟವಾಗಿ ಬರಗಾಲ ಬಿದ್ದ ಸಂದರ್ಭದಲ್ಲಿ, ಸರಕಾರ ಬಡಬಗ್ಗರಿಗೆ, ಅಗ್ಗದರ ಅಂಗಡಿಯ ಮೂಲಕ ದವಸಧಾನ್ಯ ವಿತರಿಸಲು ಹಿಂದೇಟು ಹಾಕಿತ್ತು. ಆ ಸಂದರ್ಭದಲ್ಲಿ ನಿಂಗಯ್ಯ ಸ್ವಾಮಿಗಳು ನಿರಂತರ 9 ದಿನಗಳವರೆಗೆ ಅನ್ನಸತ್ಯಾಗ್ರಹ ಕೈಗೊಂಡು, ಬಡವರ ಸಮಸ್ಯೆಗೆ ಸರಕಾರ ತೀವ್ರವಾಗಿ ಸ್ಪಂದಿಸುವಂತೆ ಮಾಡಿದರು. ಹಾಗೆಯೇ ನೀರು, ವಿದ್ಯುತ್ ಇತ್ಯಾದಿ ಜೀವನಾವಶ್ಯಕ ವಸ್ತುಗಳ ಕೊರತೆಯಿಂದಾಗಿ ಜನತೆ ಅದರಲ್ಲಿಯೂ ಬಡವರು ಬಳಲುವುದನ್ನು ಕಂಡಕೂಡಲೇ, ಸ್ವಾಮಿಗಳು ಅಲ್ಲಿ ಹಾಜರಿದ್ದು ಜೀವನ ಹಂಗುದೊರೆದು ಹೋರಾಡಿ ಅವರಿಗೆ ಅನುಕೂಲಿಸುತ್ತಿದ್ದರು. 'ಬಡವರ ಬಂಧು' ವಾಗಿ ಗೋಕಾಕ ನಗರದಲ್ಲಿ ಜೀವತೇಯ್ದವರು ಸ್ವಾಮೀಜಿ ಎಂದರೆ ಅತ್ಯುಕ್ತಿಯಾಗದು. ಬಡಜನ, ಹಿಂದುಳಿದವರು, ಪರಿಶಿಷ್ಟ ಜಾತಿ–ಪರಿಶಿಷ್ಟ ಜನಾಂಗ, ಅಲ್ಪಸಂಖ್ಯಾತರೊಂದಿಗೆ ಸ್ವಾಮಿಗಳ ಒಡನಾಟ–ಸಂಬಂಧ ಹೆಚ್ಚು ಇತ್ತು. ಬಡಜನತೆ ತಮ್ಮ ಹಳ್ಳಿಗಳಿಂದ ಗೋಕಾಕ ನಗರಕ್ಕೆ ಓಡಾಡಲು ಬಸ್ ಸೌಕರ್ಯಕ್ಕಾಗಿ, ಬಸ್ ನಿಲ್ದಾಣಕ್ಕಾಗಿ ಇವರು ಉಪವಾಸ ಸತ್ಯಾಗ್ರಹ ಕೈಕೊಂಡಿದ್ದರು. ಘಟಪ್ರಭೆಯ ಕೆ.ಎಚ್.ಇ. ಆಸ್ಪತ್ರೆಯ ನೌಕರರ ಬವಣೆ ತೊಲಗಿಸಲು ಅನ್ನಸತ್ಯಾಗ್ರಹ ಮಾಡಿದ್ದರು. ಹಿಂದೂ–ಮುಸ್ಲಿಂ ಕೋಮು ಸಾಮರಸ್ಯಕ್ಕೆ ಹಲವಾರು ರೀತಿಯಲ್ಲಿ ಹೋರಾಡಿದ್ದಾರೆ. ಸಣ್ಣಪುಟ್ಟ ದೊಂಬಿ, ಗಲಾಟೆ, ಜಗಳವಾದಲ್ಲಿ ಸ್ವಾಮೀಜಿ ಅಲ್ಲಲ್ಲಿಯೇ ಬಗೆಹರಿಸಿಬಿಡುವ ಚಾಣಾಕ್ಷರಾಗಿದ್ದರು. ಗಾಂಧೀಜಿಯವರ ಸತ್ಯ, ಅಹಿಂಸೆ, ತ್ಯಾಗ ಮತ್ತು ಉಪವಾಸ ವ್ರತಾಚರಣೆಗಳ ಮೂಲಕ ಜನಪದ ಹೋರಾಟಗಳನ್ನು ಆಯೋಜಿಸಿ, ಯಶಸ್ವಿಗೊಳಿಸುತ್ತ ಬಂದ ನಿಜವಾದ

ಗಾಂಧಿ ಅನುಯಾಯಿಗಳಿವರು. ಜನಪರ ಹೋರಾಟದಿಂದ ನಿಂಗಯ್ಯ ಸ್ವಾಮಿಗಳ ಹೆಸರು ಗೋಕಾಕ ಪರಿಸರದಲ್ಲಿ ಚಿರಪರಿಚಿತವಾಯ್ತು. ಅಷ್ಟೇ ಏಕೆ! ಗೋಕಾಕ ತಾಲ್ಲೂಕು ಮತ್ತು ಬೆಳಗಾವಿ ಜಿಲ್ಲೆಯ ಉತ್ತಮ ಸಾಮಾಜಿಕ ಕಾರ್ಯಕರ್ತನೆಂದು ಹೆಸರುವಾಸಿಯಾದರು. ನಿಜಗುಣಿ ಆಟದ 'ಪ್ರಮೀಳೆ' ಪಾತ್ರಾಭಿನಯದ ಮೂಲಕ ಸ್ವಾಮಿಗಳು ಈಗಾಗಲೇ ಕಲಾರಸಿಕರೆಲ್ಲರ ಹೃದಯುವನ್ನು ಗೆದ್ದು, ಶ್ರೇಷ್ಠ ಜನಪದ ರಂಗಕಲಾವಿದರೆಂಬ ಕೀರ್ತಿಯನ್ನು ಸಂಪಾದಿಸಿದ್ದರು. ಇದಂತು ಮರೆಯುವಂಥದಲ್ಲ!

ರಾಜಕೀಯ ಸೇವೆ : ತಮ್ಮ ಜನಪ್ರಿಯತೆಯ ಕಾರಣದಿಂದಾಗಿಯೇ 1962–63ರಲ್ಲಿ ನಗರಸಭೆಯ ಸದಸ್ಯತ್ವವನ್ನು ಚುನಾವಣೆಯ ಮೂಲಕ ಗಿಟ್ಟಿಸಿಕೊಂಡರು. ಗೋಕಾಕ ನಗರಸಭೆಯ ಸದಸ್ಯತ್ವವನ್ನು ತಮ್ಮ ಜೀವಿತದ ಕೊನೆಗಳಿಗೆಯುವರೆಗೂ ಅಂದರೆ ಅಖಂಡ 45 ವರುಷಗಳವರೆಗೆ ಉಳಿಸಿಕೊಂಡುದು ಒಂದು ಇತಿಹಾಸವೇ. 15 (ಮೂರು ಅವಧಿ) ವರುಷಗಳ ಸುದೀರ್ಘಕಾಲ ನಗರಾಧ್ಯಕ್ಷರಾಗಿಯೂ ಜನಸೇವೆ ಮಾಡಿದ ನಿಂಗಯ್ಯಸ್ವಾಮಿಗಳದು ಅಪರೂಪದ ವ್ಯಕ್ತಿತ್ವ ಎರಡು ಬಾರಿ ಅರಭಾವಿ ಮತಕ್ಷೇತ್ರದಿಂದ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿದ್ದರು, ಸಂಸ್ಥಾ ಕಾಂಗ್ರೆಸ್ ಮತ್ತು ಜನತಾ ಪಕ್ಷದಿಂದ (1972 ಮತ್ತು 1978). ಇವರ ರಾಜಕೀಯ ಜೀವನ ಕೂಡ ಹೋರಾಟದಿಂದಲೇ ಕೂಡಿತ್ತು. ರಾಜಕೀಯದಲ್ಲಿರುವಾಗಲೂ ಬಡವರ ಸೇವೆಯನ್ನೇ ದೇವರ ಸೇವೆಯೆಂದು ಮಾಡಿದರು. ಅವರಿಗೆಲ್ಲ ವಾಸಿಸಲು ಪುಕ್ಕಟೆ ಮನೆ ನಿವೇಶನಗಳನ್ನು, ನಗರದ ಬಸ್‌ಸ್ಟ್ಯಾಂಡ್ ಮೇಲ್ಭಾಗದಲ್ಲಿ ನೀಡಿದರು. ಇಲ್ಲಿ ವಾಸಿಸುವ ಬಡಜನ ಈ ಪ್ರದೇಶಕ್ಕೆ 'ನಿಂಗಯ್ಯನಗರ' ವೆಂದು

ಅಭಿಮಾನದಿಂದ ನಾಮಕರಣ ಮಾಡಿದೆ. ಈಗದು 'ಅಂಬೇಡ್ಕರ್ ನಗರ' ವೆಂದು ಹೆಸರಾಗಿದೆ.

ಇತರೆ ಸೇವೆ : ನಿಂಗಯ್ಯಸ್ವಾಮಿ ಪೂಜಾರಿ ಅವರು ಎ.ಪಿ.ಎಂ.ಸಿ. ಸದಸ್ಯರಾಗಿ ಹಾಗೂ ಅನೇಕ ಸಂಘ-ಸಂಸ್ಥೆಗಳ, ಸಹಕಾರಿ ಸಂಘಗಳ ಸಂಸ್ಥಾಪಕರಾಗಿ, ಪದಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ಶಿಕ್ಷಣ ಸಂಸ್ಥೆಯಲ್ಲಿ ಪದಾಧಿಕಾರಿಯಾಗಿ ಸೇವೆ ಸಲ್ಲಿಸುವುದರ ಜೊತೆಗೆ ಬಡ ವಿದ್ಯಾರ್ಥಿಗಳ ಸಲುವಾಗಿ ಹತ್ತು ವರುಷ ಉಚಿತ ಪ್ರಸಾದನಿಲಯವನ್ನು ನಡೆಯಿಸಿದ್ದಾರೆ. ಗೋಕಾಕ ವರದಿ ಅನುಷ್ಠಾನ ಸಮಿತಿ, ಗೋಕಾಕ- ಇದರ ಅಧ್ಯಕ್ಷರಾಗಿ ಗೋಕಾಕ ವರದಿ ಅನುಷ್ಠಾನ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಮಹಾಜನ ವರದಿ ಜಾರಿಗೆ ಆಗ್ರಹಿಸಿ ಗೋಕಾಕದಲ್ಲಿ ನಡೆದ ಹೋರಾಟದ ನೇತೃತ್ವವನ್ನು ವಹಿಸಿ ಹೋರಾಟ ಯಶಸ್ವಿಗೊಳಿಸಿದ್ದಾರೆ. ಗೋಕಾಕ ಜಿಲ್ಲಾ ಚಾಲನಾ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. 'ಕರ್ನಾಟಕ ಸಂಘ, ಗೋಕಾಕ' ಇದರ ಸಂಸ್ಥಾಪಕರಾಗಿ ಹಾಗೂ ಅಧ್ಯಕ್ಷರಾಗಿ ಮೂರು ದಶಕಗಳವರೆಗೆ ಸಾರ್ಥಕ ಸೇವೆ ಸಲ್ಲಿಸಿದ್ದಾರೆ. ಈ ಸಂಘಟನೆಯ ಮೂಲಕ ನಾಡಹಬ್ಬದಾಚರಣೆ, ಸಾಹಿತ್ಯ-ಸಾಂಸ್ಕೃತಿಕ ಕಾರ್ಯಚಟುವಟಿಕೆಗಳನ್ನು ನಿರಂತರವಾಗಿ ನಡೆಸಿಕೊಂಡು ಬಂದಿದ್ದರು. 'ಜ್ಯೋತಿ ಕಲಾವಿದರ ಸಂಘ, ಗೋಕಾಕ' ಇದರ ಸಂಸ್ಥಾಪಕರಾಗಿ ಹಾಗೂ ಅಧ್ಯಕ್ಷರಾಗಿ ಉದಯೋನ್ಮುಖ ಕಲಾವಿದರನ್ನು ಬೆಳಕಿಗೆ ತಂದರು; ಹೊಸ ಹೊಸ ನಾಟಕಗಳನ್ನು ಪ್ರದರ್ಶಿಸಿದರು. ಬೆಳಗಾವಿ ಜಿಲ್ಲೆ ಜನಪದ ಕಲಾವಿದರ ಸಂಘದ ಸಂಸ್ಥಾಪಕರಾಗಿ ಹಾಗು ಅಧ್ಯಕ್ಷರಾಗಿ ಬಡಕಲಾವಿದರಿಗೆ ಸಹಾಯ-ಸೌಕರ್ಯ ಒದಗಿಸಿದ್ದಾರೆ.

ಮರಳಿ ಪಾತ್ರಾಭಿನಯಕ್ಕೆ : ಗೋಕಾಕದ ರಾಜಕೀಯ ವ್ಯಕ್ತಿಯಾಗಿ ನಿಂಗಯ್ಯಸ್ವಾಮಿಗಳು ರೂಪುಗೊಂಡುದು ಪ್ರಾಮುಖ್ಯವಾಗಿ ಅವರ ಕಲಾಭಿನಯದಿಂದಲೇ ಎಂಬುದು ನಿರ್ವಿವಾದ. ಗೋಕಾಕನಗರ ಸಭೆಯ ಗದ್ದುಗೆಯನ್ನೇರಿದ ಅವಧಿಯಲ್ಲಿ (1971–1985) ಕೆಲಸದ ಒತ್ತಡದಿಂದ ಆಟ ಆಡುವುದನ್ನು ಸ್ವಾಮಿಗಳು ನಿಲ್ಲಿಸಿಯೇ ಬಿಟ್ಟರು. ಕಲಾವಿದರಿದ್ದುಕೊಂಡು, ರಾಜಕೀಯ ಪ್ರವೇಶಿಸಿ, ಅಲ್ಲಿಯೂ ಉಲ್ಲೇಖಾರ್ಹ ಕೆಲಸ–ಕಾರ್ಯ ಮಾಡುತ್ತ ನಡೆದ ನಿಂಗಯ್ಯ ಸ್ವಾಮಿಗಳವರ ಗಾಢ ಪರಿಚಯ, ಪ್ರಸಿದ್ಧ ಕವಿ–ನಾಟಕಕಾರ ಡಾ. ಚಂದ್ರಶೇಖರ ಕಂಬಾರ ಅವರಿಗೆ ಆಯಿತು. ಡಾ. ಕಂಬಾರರು ಏಳನೇ ತರಗತಿಯಲ್ಲಿ ಓದುತ್ತಿರುವಾಗಲೇ ಸ್ವಾಮಿಗಳ ಆಟ ನೋಡಿದವರು ಮೆಚ್ಚಿಕೊಂಡವರು ಈಗ ಸ್ವಾಮಿಗಳು ಆಟ ನಿಲ್ಲಿಸಿದ್ದನ್ನು ಕಂಡು, ಅವರಿಗೆ ಆಟ ಮುಂದುವರಿಸಲು ಕಂಬಾರರು ಒತ್ತಾಯಿಸಿದರು. ಅಂದಿನಿಂದ ಸ್ವಾಮಿಗಳು ಮತ್ತೆ ಸಣ್ಣಾಟದಲ್ಲಿ ಪ್ರಮೀಳಾ ಪಾತ್ರದ ಮೂಲಕ ಕಾಣತೊಡಗಿದರು. 'ನಿಜಗುಣ ಶಿವಯೋಗಿ' ಬಯಲಾಟಕ್ಕೆ ಹಿಂದಿನ ಚೈತನ್ಯ ಮರುಕಳಿಸಿದಂತಾಯಿತು. ಹಾಗಾಗಿ, 1983ರಲ್ಲಿ ನಗರಸಭೆಯ ಅಧ್ಯಕ್ಷರಿದ್ದಾಗ, ಸ್ವಾಮಿಯವರ ಈ ಬಯಲಾಟ ಪ್ರದರ್ಶನ ಕು.ಶಿ. ಹರಿದಾಸಭಟ್ಟರ ಸಮ್ಮುಖದಲ್ಲಿ ಉಡುಪಿಯಲ್ಲಿ ಜರುಗಿತ್ತು. ಬಯಲಾಟವನ್ನು ಭಟ್ಟರು ಸಮಗ್ರವಾಗಿ ಕ್ಯಾಸೆಟ್ಟಿನಲ್ಲಿ ಸೆರೆಹಿಡಿದು ಆಂಗ್ಲಭಾಷೆಗೆ ಭಾಷಾಂತರಿಸಿ ವಿದೇಶಕ್ಕೂ ರವಾನಿಸಿದ್ದರಂತೆ.

1990ರಲ್ಲಿ ಈ ಆಟದ ಮಾಸ್ತರ ಶ್ರೀ ಗಡಕರಿ ತೀರಿಹೋದರು. ಬಯಲಾಟದ ಸಂಪೂರ್ಣ ಜವಾಬ್ದಾರಿ ಸ್ವಾಮಿಗಳ ಮೇಲೆ ಬಿತ್ತು. ಇವರೇ ಸೂತ್ರಧಾರರು, ಸಂಘಟಕರು, ಗಡಕರಿ ಅವರ ಕಾಲದಿಂದ

ನಿನ್ನೆ ಮೊನ್ನೆಯತನಕ 'ನಿಜಗುಣ' ಆಟದ ಸುಮಾರು ಐದಾರು ಸಾವಿರ ಪ್ರಯೋಗಗಳಾದುದನ್ನು ಸ್ವಾಮಿಗಳು ನೆನಪಿಸಿಕೊಂಡು ಅಭಿಮಾನದಿಂದ ಹೇಳುತ್ತಿದ್ದರು. ಕನ್ನಡ ಪ್ರದೇಶಗಳಲ್ಲಿ ಮಾತ್ರವಲ್ಲದೆ, ನೆರೆಯ ರಾಜ್ಯಗಳಲ್ಲಿಯೂ ಈ ಬಯಲಾಟ ಪ್ರಯೋಗಗೊಂಡು ಖ್ಯಾತಿಯನ್ನು ಗಳಿಸಿದರು. ಒಂದೇ ಸ್ಥಳದಲ್ಲಿ ಈ ಆಟದ ಅನೇಕ ಪ್ರಯೋಗಗಳಾದುದೂ ಉಂಟು. ಗೋಕಾಕ ನಗರದಲ್ಲಿಯಂತೂ ಲೆಕ್ಕವಿಲ್ಲ. ಎಷ್ಟು ಸಲ ನೋಡಿದರೂ ಜನಗಳು ಬೇಸರಿಸಿಲ್ಲ. ಇಂದು ಈ ಬಯಲಾಟ ಪ್ರಯೋಗ ಒಂದಕ್ಕೆ ಸುಮಾರು ಎರಡರಿಂದ ಮೂರು ಸಾವಿರದವರೆಗೆ ಸಂಭಾವನೆ ಸಿಕ್ಕುತ್ತದೆ. ಈ ದುಡ್ಡಿನಲ್ಲಿ ಮತ್ತು ಆಹೇರದ ದುಡ್ಡಿನಲ್ಲಿ, ಸಹಕಲಾವಿದರಿಗೆ ಹಂಚಿ, ಉಳಿದುದರಲ್ಲಿ ಗುಡಿ-ಗುಂಡಾರಗಳ ಜೀರ್ಣೋದ್ಧಾರ, ಕಟ್ಟಡ ನಿರ್ಮಾಣ ಇತ್ಯಾದಿಗಳಿಗೆ ದಾನರೂಪದಲ್ಲಿ ಸ್ವಾಮಿಗಳು ನೀಡುತ್ತಿದ್ದುದನ್ನು ಮತ್ತೆ ಹೇಳಬೇಕಾಗಿಲ್ಲ. ಆಟದಿಂದ ಬರುವ ಈ ಬಗೆಯ ಆಯದೊಳಗಿನ ಸ್ವಲ್ಪ ಸ್ವಲ್ಪ ಹಣ ಉಳಿಸಿಕೊಡು ಮೋಟರೊಂದನ್ನು ಖರೀದಿಸಿದ್ದನ್ನು ಸ್ವಾಮಿಗಳು ತುಂಬ ಅಭಿಮಾನದಿಂದ ಹೇಳಿಕೊಳ್ಳುತ್ತಿದ್ದುದುಂಟು.

ವ್ಯಕ್ತಿತ್ವದ ವ್ಯಕ್ತಿ : ನಿಂಗಯ್ಯಸ್ವಾಮಿ ಪೂಜಾರಿ ಅವರು ವಿನಯಶಾಲಿಗಳು, ಆತ್ಮವಿಶ್ವಾಸವುಳ್ಳವರು ಮತ್ತು ಆತ್ಮಾಭಿಮಾನಿ. ಈ ರಂಗಕಲಾಕ್ಷೇತ್ರದಲ್ಲಿ ಇವರಿಗೆ ತೊಡಕು ತೊಂದರೆಗಳಾಗಲೀ ಆತಂಕಗಳಾಗಲೀ ಬಂದೇ ಇಲ್ಲ. ಸ್ವತಃ ದುಡಿಮೆಗಾರರು. ಯಾರ ಹಂಗಿಗೂ ಒಳಗಾದವರಲ್ಲ. ಯಾವ ಹೀನಕೆಲಸಕ್ಕೂ ಕೈಹಾಕಿದವರಲ್ಲ. ತಮ್ಮದೇ ಆದ ವಿಶಿಷ್ಟ ರೀತಿಯ ಸರಳ ಬದುಕಿನ ಮಾರ್ಗಹಿಡಿದು ನಡೆದವರು. ಹೀಗಾಗಿ, ನಿಂಗಯ್ಯ ಸ್ವಾಮಿಗಳಿಗೆ ತಮ್ಮ ಮೇಲೆ ಅಪಾರ ಅಭಿಮಾನ. ಮೋಟಾರ ಕ್ಲೀನರ್ ಕೆಲಸದಿಂದ ನಗರಸಭೆಯ ಅಧ್ಯಕ್ಷ ಪದವಿ. ಇದಕ್ಕೂ ಮಿಗಿಲಾಗಿ

ಮತ್ತು ಮುಖ್ಯವಾಗಿ ಅದ್ವಿತೀಯ ನಟನಾಗಿ ಮೇಲ್ಮಟ್ಟಕ್ಕೇರಿದ್ದೇನೆಂಬ ಅಭಿಮಾನ ಸಹಜವಾಗಿ ಅವರಲ್ಲಿತ್ತು.

ಸ್ವಾಮಿಗಳು ಏನೇ ಮಾಡಿದರೂ ಅಲ್ಲೆಲ್ಲ ಅವರ ಅಚ್ಚುಕಟ್ಟುತನ. ತಮ್ಮ ನಿರೀಕ್ಷೆಯಂತೆ ಕೆಲಸ ನಡೆಯಬೇಕೆಂಬ ಆಸೆ; ವ್ಯವಹಾರದಲ್ಲಿ ಸ್ಪಷ್ಟತೆ, ಪ್ರಾಮಾಣಿಕತೆ; ಮಾತಿನಲ್ಲಿ ಜಾಗರೂಕತೆ ಮತ್ತು ಹಿತಮಿತ ಮೃದು. ಸತ್ಯದ ಸರಳಸ್ವಭಾವ ಅವರದು. ಸಲಿಗೆ ಇರಿಸಿಕೊಂಡರೂ ಅತಿಯಾದುದಲ್ಲ; ಎಷ್ಟೇ ಬೇಕಾದವರಿದ್ದರೂ ಸ್ವತಂತ್ರ ನಿಲುವು. ಸಭೆ, ಸಮಾರಂಭ, ಸಂಗೀತ ಕಛೇರಿ, ಆಟ–ಬಯಲಾಟಗಳೆಂದರೆ ವಿಶೇಷ ಆಸಕ್ತಿ. ಸ್ಫಟಿಕದಂಥ ಪರಿಶುದ್ಧ ಹೃದಯದ ಸ್ವಾಮಿಗಳದು ದೊಡ್ಡ ವ್ಯಕ್ತಿತ್ವ. ಅವರು ತಮ್ಮ ಜೀವನದುದ್ದಕ್ಕೂ ಧೈರ್ಯ–ಸ್ಥೈರ್ಯವುಳ್ಳವರಾಗಿದ್ದರು. ಎಂಥ ತೊಡಕು–ತೊಂದರೆ ಎದುರಾದಾಗಲೂ ಸೊಪ್ಪುಹಾಕುತ್ತಿರಲಿಲ್ಲ. ಹಿರಿಕಿರಿಯೆನ್ನದೆ ಎಲ್ಲರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದರು. ಖಾಸಗಿ ಕೆಲಸವಿರಲಿ, ಸರಕಾರದ್ದೇ ಆಗಿರಲಿ ತಕ್ಷಣ ಮಾಡಿಸುತ್ತಿದ್ದರು. ಬಡವ–ಬಲ್ಲಿದನೆನ್ನದೆ ಎಲ್ಲರ ಮನೆಗೂ ಹೋಗುತ್ತಿದ್ದರು, ಕ್ಷೇಮಸಮಾಚಾರ ವಿಚಾರಿಸುತ್ತಿದ್ದರು. ಮದುವೆ ಮುಂತಾದ ಶುಭ ಪ್ರಸಂಗಗಳಿರಲಿ, ಶವಸಂಸ್ಕಾರದಂಥ ಸಂದರ್ಭಗಳಲ್ಲೆಲ್ಲ ಸ್ವಾಮೀಜಿ ತಪ್ಪದೇ ಹಾಜರ ಇರುವವರೇ. ಎಲ್ಲರೊಳಗೊಂದಿರುವುದನ್ನು ತಮ್ಮ ಬದುಕಿನ ವೈಶಿಷ್ಟ್ಯವನ್ನಾಗಿಸಿಕೊಂಡಿದ್ದರು. ಗೋಕಾಕ ಹೆಸರೆತ್ತಿದರೆ ಸಾಕು, ನಿಂಗಯ್ಯ ಸ್ವಾಮಿಗಳವರು ತಟ್ಟನೆ ನೆನಪಾಗುತ್ತಾರೆ. ಈ ಅಪರೂಪದ ವ್ಯಕ್ತಿಯ ವ್ಯಕ್ತಿತ್ವವನ್ನು ಮೂರು ಆಯಾಮಗಳಲ್ಲಿ ಗುರುತಿಸಬಹುದು; ಸಮಾಜ ಸೇವಕರಾಗಿ, ರಾಜಕಾರಣಿಯಾಗಿ ಎಲ್ಲಕ್ಕಿಂತ ಮಿಗಿಲಾಗಿ ಜನಪದ ರಂಗಭೂಮಿಯ ಕಲಾವಿದರಾಗಿ : ಇವು ಒಂದಕ್ಕಿಂತ ಒಂದು ಮಿಗಿಲಾದ

ಅವರ ಸೇವಾಕಾರ್ಯಗಳು. ಈ ಮೂರರ ಮುಪ್ಪರಿಗೊಂಡ ವ್ಯಕ್ತಿತ್ವವೇ ನಿಂಗಯ್ಯ ಸ್ವಾಮಿಗಳು.

ನಿಜಗುಣ ಶಿವಯೋಗಿ ಡಪ್ಪಿನಾಟ : ಈ ಆಟದ ಕಥಾವಸ್ತು ಮತ್ತು ಅದು ನೀಡುವ ಸಂದೇಶಕ್ಕೆ ಮಾರುಹೋಗಿ, ಮೆಚ್ಚಿ, ನಿಂಗಯ್ಯಸ್ವಾಮಿಗಳು, ಅದನ್ನು ಗೋಕಾಕ ನಾಡಿನಲ್ಲಿ ಪ್ರಚುರಪಡಿಸಿದರು. ಈ ಆಟದ ಪ್ರದರ್ಶನಕ್ಕೆ ತಮ್ಮದೇ ಆದ ಒಂದು ವಿಶಿಷ್ಟ ಪರಂಪರೆಯನ್ನೇ ಹಾಕಿಕೊಟ್ಟರು. ಆ ಭಾಗದಲ್ಲಿ ಇಂದು ಆಡುವ ಕಲಾವಿದರೂ ಕೂಡ ಇವರ ಪರಂಪರೆಯ ಜಾಡಿನಲ್ಲಿಯೇ ಆಟ ಪ್ರದರ್ಶಿಸುತ್ತಿದ್ದುದು ಕಂಡುಬರುತ್ತದೆ.

ತಿರುನೀಲಕಂಠ, ಕಬೀರದಾಸ, ತುಕಾರಾಮ ಮುಂತಾದ ಭಕ್ತರ ಕಥೆಗಳನ್ನೊಳಗೊಂಡ ಜನಪದ ಸಣ್ಣಾಟ ಅಥವಾ ಡಪ್ಪಿನಾಟಗಳಲ್ಲಿ 'ನಿಜಗುಣ ಶಿವಯೋಗಿ' ಆಟವೂ ಒಂದು. ಇದನ್ನು ಬೈಲಹೊಂಗಲ-ಸಂಪಗಾಂವ ಸಮೀಪದ ಹಣ್ಣಿಕೇರಿ ಗ್ರಾಮದ ಯಲ್ಲಪ್ಪ ಮುನೆನ್ನಿ ಹೆಸರಿನ 'ಶಿವಾನಂದ' ಕಾವ್ಯನಾಮದ ಕವಿ ರಚಿಸಿದ್ದಾನೆ. ಜನಪದದಿಂದ ಜನಪ್ರಿಯವಾದ ಈ ಆಟದ ಕಥಾಸಾರವೆಂದರೆ- ಗುರುಶಂಭುಲಿಂಗ ತನ್ನ ಶಿಷ್ಯ ನಿಜಗುಣಿಯ ಗಟ್ಟಿವ್ಯಕ್ತಿತ್ವವನ್ನು ಪರೀಕ್ಷಿಸುವ ಸಲುವಾಗಿ ವೇಶ್ಯೆಯ ತಲೆ ತಿಕ್ಕುವಾಗ ನಿಜಗುಣರ ಕೈಸ್ಪರ್ಶದಿಂದ ಅವಳ ದೃಷ್ಟಿ ಬರುವುದು. ಪ್ರತ್ಯುಪಕಾರ ಮಾಡಬೇಕೆನ್ನುವ ಮಹದಾಸೆಯಿಂದ ತಾರುಣ್ಯದ ಅಬ್ಬರದಿಂದ ಬೀಗುವ ವೇಶ್ಯೆಯ ಮಗಳು, 'ಪ್ರಮೀಳಾ' ನಿಜಗುಣರನ್ನು ಮದುವೆಯಾಗಲು ಬಯಸುತ್ತಾಳೆ. ನಿಜಗುಣರು ಒಪ್ಪುವುದಿಲ್ಲ; ಇವಳು ಬಿಡುವುದಿಲ್ಲ. ವಾದವಿವಾದ ಬೆಳೆಯುತ್ತದೆ. ನಾಟಕಕ್ಕೆ ರಂಗೇರುತ್ತದೆ.



'ಪ್ರಮೀಳ' ಅತ್ಯಂತ ವೈಭವೋಪೇತ ಅಲಂಕಾರ ಮಾಡಿಕೊಂಡು ತನ್ನ ವಿಲಾಸ ಮಂಟಪಕ್ಕೆ ನಿಜಗುಣರನ್ನು ಎಳೆಯಲು ಪ್ರಯತ್ನಿಸಿ ವಿಫಲಳಾಗುತ್ತಾಳೆ. ಮುಖಭಂಗಿತಳಾದ ಈಕೆ ಸೇಡು ತೀರಿಸಿಕೊಳ್ಳಲು ಬಂಗಾರದ ಆಭರಣಗಳನ್ನು ಕದ್ದೊಯ್ದು ಕಳವಿನ ಆರೋಪವನ್ನು ನಿಜಗುಣರ ಮೇಲೆ ಹೊರಿಸಲುದ್ಯುಕ್ತಳಾಗುತ್ತಾಳೆ. ನಿಜಗುಣರು ಕಣ್ಣಿಗೆ ಕಾಣದಾದರು. ಇತ್ತ ಭೂತ ದುತ್ತನೇ ಪ್ರತ್ಯಕ್ಷವಾಗಿ ಅವಳನ್ನು ಹಿಗ್ಗಾಮುಗ್ಗಾ ಜಗ್ಗಾಡತೊಡಗುವುದು, ಭೂತದ ಬಾಹುಗಳಿಂದ ಕೊಸರಿಕೊಳ್ಳಲು ಯತ್ನಿಸಿ ಬೇಸತ್ತು, ಸಣ್ಣಾಗಿ ನಿಜಗುಣರನ್ನು 'ಪ್ರಮೀಳಾ' ಸ್ಮರಿಸುತ್ತಾಳೆ. ನಿಜಗುಣರ ಸೂಚನೆಯ ಮೇರೆಗೆ ಭೂತದ ಕಾಟ ತಡೆಯಲು ಶಂಭುಲಿಂಗನನ್ನು ಪ್ರಾರ್ಥಿಸುತ್ತಾಳೆ. ಶಂಭುಲಿಂಗನ ಕೃಪೆಯಿಂದ ಅವಳನ್ನು ಹಿಡಿದ ಭೂತ ಬಿಟ್ಟು ಮಾಯವಾಗುತ್ತದೆ. (ಇಲ್ಲಿ ಭೂತ ಕಾಮದ ಸಂಕೇತ). ನಿಜಗುಣರು ಪ್ರತ್ಯಕ್ಷವಾಗಿ ಪ್ರಮೀಳೆಗೆ ಭಕ್ತಿಯ ಸತ್ಯದರ್ಶನ ನೀಡುತ್ತಾರೆ. ಅವಳ ಭವಿತನ ದೂರಾಗಿ ಭಕ್ತೆಯಾಗುತ್ತಾಳೆ. ಇಲ್ಲಿ ಭಕ್ತರು ಪಾತರದವರು... ಯಾರೇ ಆಗಿರಲಿ

ಅವರಿಗೆ ಗುರೂಪದೇಶ ದೊರೆತರೆ ಆತ್ಮಸಾಕ್ಷಾತ್ಕಾರ ಸಾಧ್ಯವೆಂಬುದನ್ನು ಸಾರುವ ಭಕ್ತಿಪ್ರಧಾನ ಈ ಆಟದಲ್ಲಿ ನಿಜಗುಣರು ಗುರೂಪದೇಶವನ್ನು ಸದಾ ಸ್ಮರಣೆಯಲ್ಲಿರಿಸಿಕೊಳ್ಳುವ ಮೂಲಕ ಆಧ್ಯಾತ್ಮದ ಗಟ್ಟಿ ವ್ಯಕ್ತಿತ್ವವನ್ನು ಪಡೆದುಕೊಂಡಿದ್ದರೆಂಬುದು ವಿಧಿತವಾಗುತ್ತದೆ. ಗುರುಶಂಭುಲಿಂಗನ ಬೋಧನೆಗೆ ಒಳಗಾದ ಕೊಳ್ಳೇಗಾಲ ಪ್ರಾಂತ್ಯದ ಮಾಂಡಲಿಕ ಅರಸ ನಿಜಗುಣ ಮಹಾರಾಜರು ವೀರವೈರಾಗ್ಯ ತಾಳಿ, ರಾಜ್ಯ ತ್ಯಜಿಸಿ ಸನ್ಯಾಸಿಯಾಗುತ್ತಾನೆ.

ಈ ಮಹಾಶಿವಯೋಗಿಯ ಪೂರ್ವಾಶ್ರಮದ ಚರಿತ್ರೆಯನ್ನು ಶಿವಾನಂದ ಕವಿ ತನ್ನ ಕಲ್ಪನೆಯ ನೆಲೆಯಲ್ಲಿ ತಾರ್ಕಿಕವಾಗಿ ಸಂಯೋಜಿಸಿ ಶುದ್ಧ ಜನಪದ ಆಟವಾಗಿಸಿದ್ದಾರೆ. ಬೆಳಗಾವಿ ಜಿಲ್ಲೆಯ ತುಂಬೆಲ್ಲ, ನಿಂಗಯ್ಯ ಸ್ವಾಮಿಗಳಂಥ ಕಲಾವಿದರಿಂದ ಈ ಆಟ ತುಂಬ ಯಶಸ್ವಿ ಪ್ರಯೋಗಗಳನ್ನು ಕಂಡಿದೆ. ನೀತಿಬೋಧೆ, ವೇದಾಂತಸಾರ, ಹೆಣ್ಣುಗಂಡಿನ ಏರಾಟ, ಸಂಯಮ, ತಾಳ್ಮೆ, ಗಂಭೀರತೆಗಳು ಸಮರ್ಥವಾಗಿ ನಿರೂಪಿತವಾಗಿವೆ. ಇಲ್ಲಿಯ ಎಲ್ಲ ಪಾತ್ರಗಳೂ ಅಚ್ಚ ಜಾನಪದ ಆವರಣದಲ್ಲಿ ಸೃಷ್ಟಿಯಾಗಿವೆ. ಜನಪದರ ಪ್ರೀತಿ, ಪ್ರೇಮ, ಕೋಪತಾಪ, ಆಸೆನಿರಾಸೆಗಳ ತದ್ವತ್ ನಿರೂಪಣೆ ಇದೆ. ನಿಜಗುಣರ ಹಸ್ತಸ್ಪರ್ಶದಿಂದ ಹುಟ್ಟುಗುರುಡು ತಾಯಿಗೆ (ವೇಶ್ಯೆ) ಕಣ್ಣು ಬಂದಾಗ ತಾಯಿ ಮಗಳಿಬ್ಬರೂ ನಿಜಗುಣರನ್ನು ಬೇಡುವ ಪರಿ ಅನ್ಯಾದೃಶವಾದುದು. ಇಲ್ಲಿಯ ಸಮೃದ್ಧ ಪ್ರಾಸ ಬಳಕೆ, ಹಾಡಿನ ಸಹಜಗತಿ, ಸಂಭಾಷಣಾರೂಪದ ಹಾಡುಗಳು ಶಿವಾನಂದ ಕವಿಯ ಪ್ರತಿಭೆಗೆ ಹೆಗ್ಗುರುತು.

ಸ್ತ್ರೀ ಪಾತ್ರಕ್ಕೆ ಜೀವ ತುಂಬಿದ ಅನನ್ಯ ಕಲಾವಿದ : ಸ್ಫಟಿಕದಂಥ ಪರಿಶುದ್ಧ ಹೃದಯದ ಶ್ರೀ ನಿಂಗಯ್ಯಸ್ವಾಮಿಗಳ ಜನಪದ

ರಂಗಪ್ರದರ್ಶನಕಲೆ ಹೊಟ್ಟೆಹೊರೆಯುವುದಕ್ಕಾಗಿ ಅಲ್ಲ; ಬದುಕಿಗಾಗಿ, ಬದುಕಿನ ಆಹ್ಲಾದ ಉಲ್ಲಾಸಗಳಿಗಾಗಿ, ಸಾಂಸ್ಕೃತಿಕ ಮೌಲ್ಯಗಳ ಉಳಿವಿಗಾಗಿ. ಹಾಗಾಗಿ, ನಿಂಗಯ್ಯ ಸ್ವಾಮಿಯವರು ನಿಜಗುಣ ಶಿವಯೋಗಿಯ 'ಪ್ರಮೀಳಾ' ಪಾತ್ರದ ಪಾರಂಪರಿಕ ಆಚಾರ ವಿಚಾರ, ವಿನೋದ-ವಿಲಾಸ, ಒನಪು-ಒಯ್ಯಾರ ಎಲ್ಲವನ್ನೂ ತಮ್ಮ ನಟನೆಗೆ ಹಿನ್ನೆಲೆಯಾಗಿರಿಸಿಕೊಂಡು, ಹಾಡು-ಮಾತು ಅಭಿನಯಾದಿಗಳಲ್ಲಿ ಅತ್ಯಂತ ನೈಜವಾಗಿ ತೋರಿದ್ದರು. ತನ್ನ ನೋಟ, ಕೈಚಳಕ ಮಾತ್ರದಿಂದಲೂ ಪ್ರಸಂಗದ ತಾತ್ಪರ್ಯ ತಟ್ಟನೇ ಮನಮುಟ್ಟುವಂತೆ ಸ್ವಾಮಿಗಳು ಮಾಡುವುದು ಕೂಡ ತುಂಬ ಸ್ವಾರಸ್ಯಕರ. ಶ್ರೀಯುತರು ರೂಪ, ಗುಣ, ಗತ್ತು, ಗಾಂಭೀರ್ಯ, ನಯ-ನಾಜೂಕು, ಒಯ್ಯಾರ, ಎಲ್ಲದರಲ್ಲೂ ವೈಶ್ಯೆಯ ಮಗಳಂತೆಯೇ (ಪ್ರಮಿಳೆ=ಪ್ರಮೀಳಾ=ಪ್ರೇಮಲಾ) ನಟಿಸುತ್ತಿದ್ದರು. ಹುಬ್ಬು ಹಾರಿಸುವುದರ ಮೂಲಕ ಮುಖಭಾವದ ಚೆಲ್ವಿಕೆಯನ್ನು ಮನದ ಇಂಗಿತವನ್ನು ಪ್ರದರ್ಶಿಸುತ್ತಿದ್ದರು. ಈ ಪಾತರದ ಪಾತ್ರಕ್ಕೆ ಜೀವ ತುಂಬಿ, ಅದರ ಎಲ್ಲ ಸಾಧ್ಯತೆಗಳನ್ನು ಸೂರೆಗೊಂಡ ಉತ್ತರ ಕರ್ನಾಟಕದ ಅನನ್ಯ ಕಲಾವಿದ ನಿಂಗಯ್ಯಸ್ವಾಮಿ ಪೂಜಾರಿ ಅವರು 'ಪ್ರೇಮಲಾ' ಪಾತ್ರದ ಹಾಡು-ಮಾತು-ಅಭಿನಯಾದಿಗಳ ಅಭಿವ್ಯಕ್ತಿಯಲ್ಲಿ ನಿಷ್ಣಾತರಿವರು. ಈ ವೇಶ್ಯಾಪಾತ್ರದ ನಯನಾಜೂಕಿನ, ಒನಪು ಒಯ್ಯಾರದ ಹೆಜ್ಜೆ ಕುಣಿತವನ್ನು ನಿರಾಯಾಸವಾಗಿ ಮತ್ತು ಸಹಜವಾಗಿ ಪ್ರದರ್ಶಿಸಬಲ್ಲವರಾಗಿದ್ದರು. ಎರಡು ಹೆಜ್ಜೆಯಿಂದ ಹನ್ನೆರಡು ಹೆಜ್ಜೆಯ ವಿವಿಧ ಸಂಯೋಜನೆಯ ಪರಂಪರಾಗತ ಹೆಜ್ಜೆಕುಣಿತ ಸ್ವಾಮಿಗಳಿಗೆ ಕರಗತವಾಗಿತ್ತು. ತುದಿಗಾಲಮೇಲೆ, ಹಿಂಬಡದ ಮೇಲೆ ಸಣ್ಣ ಸಣ್ಣ ಹೆಜ್ಜೆಗಳನ್ನಿಟ್ಟು ತೀವ್ರವಾಗಿ 'ದಿಡುಗಿನ ಕುಣಿತ' ವನ್ನು ರಂಗಭೂಮಿಗೆ ಆಗಮಿಸುವಾಗ, ನಿರ್ಗಮಿಸುವಾಗ ಮತ್ತು ಹಾಡುವಾಗ

ಬಿಡುವಿಲ್ಲದೆ 'ಥಂಗ' (ತಾಳ ಮುರಿಯುವವರೆಗೆ=ಮುಗಿಯುವವರೆಗೆ) ಮುಗಿಯುವವರೆಗೆ ಕುಣಿಯುತ್ತಿದ್ದರು. ಈ ಪಾತ್ರದ ಹೆಜ್ಜೆ ಕುಣಿತ ಬಹು ಸೂಕ್ಷ್ಮವಾದುದು. ಎರಡೂ ಕೈಬೆರಳುಗಳಿಂದ ಮುದ್ರೆ ತೋರಿಸುವ, ಕೈ ಮುಂದೆ ಚಾಚಿ, ಕಾಲು ಹಿಂದಕ್ಕೆ ನೀಡಿ, ಒಮ್ಮೆ ತುದಿಗಾಲಮೇಲೆ, ಇನ್ನೊಮ್ಮೆ ಹಿಂಬಡದ ಮೇಲೆ ಕುಣಿಯುವ ಕಲಾಕೌಶಲ ಸ್ವಾಮಿಯವರಲ್ಲಿತ್ತು. 'ನಿಲಗಿಯ ಕುಣಿತ', ಒಂಟಿ ಹೆಜ್ಜೆಯ ಕುಣಿತಗಳನ್ನು ಸ್ವಾಮಿಗಳಂತೆ ಕರಾರುವಕ್ಕಾಗಿ ಕುಣಿಯುವವರು ಇಂದು ಇದ್ದಂತಿಲ್ಲ. ಒಂದು ಕೈ ಟೊಂಕದ ಮೇಲೆ, ಇನ್ನೊಮ್ಮೆ ಎರಡೂ ಕೈ ಟೊಂಕದ ಮೇಲೆ ಇರಿಸಿಕೊಂಡು ಸ್ತ್ರೀಪಾತ್ರದ ಕುಣಿತ ಮಾಡುತ್ತಿದ್ದರು; ಪಾದಗಳನ್ನು ನೆಲದ ಮೇಲೆ ಸವರುತ್ತ ಕುಣಿಯುವ 'ಸವರೆಜ್ಜೆ ಕುಣಿತ' ಹಿಂದಕ್ಕೆ-ಮುಂದಕ್ಕೆ, ಅಕ್ಕ ಪಕ್ಕ ಪಾದಗಳನ್ನು ಸರಿಸುತ್ತಾ 'ಮೂರು ಹೆಜ್ಜೆಯ ಕುಣಿತ' ಮಾಡುತ್ತಲೇ ರಸಿಕ ಸಭಿಕರನ್ನು ರಂಜಿಸುತ್ತಿದ್ದರು. ಇವರ ಹೆಜ್ಜೆ ಕುಣಿತದಲ್ಲಿ ಮತ್ತು ಆಂಗಿಕ ಅಭಿನಯದಲ್ಲಿ 'ಭರತನಾಟ್ಯ'ದ ಕೆಲವು ಮುದ್ರೆಗಳನ್ನು ಅಥವಾ ಭಂಗಿಗಳನ್ನು ಗುರುತಿಸಬಹುದು.

ಮುಖಬಣ್ಣ ಬಳಿದು, ಭರ್ಜರಿ ರೇಶಿಮೆ ಸೀರೆ ಉಟ್ಟು, ಅದಕ್ಕೊಪ್ಪುವ ರವಿಕೆ ತೊಟ್ಟು ಎರಡೂ ಕೈತುಂಬ ಬಳೆ ತೊಟ್ಟು, ಬೆರಳಿಗೆ ಹರಳಿನುಂಗುರ ಸಿಕ್ಕಿಸಿಕೊಂಡು, ಮೂಗುಬೊಟ್ಟು ಇಟ್ಟು ಮುತ್ತಿನ ಕಂಠಹಾರ ಧರಿಸಿ, ಥಳಥಳ ಹೊಳೆಯುವ ಜರದ ನಡುಕಟ್ಟು, ಕೈಕಟ್ಟು, ಬಾಜುಬಂಧ, ಮುತ್ತಿನ ಸಣ್ಣ ತಲೆಕಿರೀಟಾದಿಗಳನ್ನು ಕಟ್ಟಿಕೊಂಡು, ಕಟ್ಟಿದ ಮುಡಿಗೆ ಹೂವು ಹೇರಪಿನ್ ಅಲಂಕರಿಸಿಕೊಂಡು, ತುಟಿಗೆ ಲಿಪ್‌ಸ್ಟಿಕ್ ಸವರಿ, ಕಾಲಿಗೆ ಗೆಜ್ಜೆಕಟ್ಟಿಕೊಂಡು ನಾಜೂಕು ನಡಿಗೆಯ, ಚಂಚಲ ನಿಲುವಿನ, ಒಯ್ಯಾರ ಮುಖಭಾವದ 'ಪ್ರಮೀಳಾ' ಪಾತ್ರಧಾರಿ, ನಿಂಗಯ್ಯ ಸ್ವಾಮಿಗಳು ಅಂಗಾಂಗಗಳನ್ನು ಕುಣಿಸುತ್ತ ಹಾಡುತ್ತ ರಂಗಪ್ರವೇಶಿಸಿದರೆ

ನೋಡುಗರಿಗೆಲ್ಲ ಪಾತರದ ಹುಡುಗಿಯೇ ಇರಬೇಕೆಂದು ಅನುಮಾನ, ಆಶ್ಚರ್ಯ. ಖಾದಿ ಟೋಪಿ, ಖಾದಿ ಅಂಗಿ, ಅಂಚುಳ್ಳ ಪಂಚೆ ಧರಿಸಿ, ಯಾವಾಗಲೂ ಬಗಲಲ್ಲೊಂದು ಚರ್ಮದ ಚೀಲವನ್ನು ಇರುಕಿಕೊಂಡು ಓಡಾಡುವ ಪಾದಚಾರಿ, ಗಂಭೀರ ನಿಲುವಿನ ಈ ಶ್ವೇತಾಂಬರಿ ನಿಂಗಯ್ಯ ಸ್ವಾಮಿಗಳೆಲ್ಲಿ!! ಆ 'ಪ್ರಮೀಳಾ' ಸ್ತ್ರೀರೂಪದ ನಿಂಗಯ್ಯ ಸ್ವಾಮಿಗಳೆಲ್ಲಿ!! ಎಂಬಂಥ ಉದ್ಗಾರ ತೆಗೆಯದೆ ಇರಲಾರೆವು. ಈ ಬಗೆಯ ಮುಜುಗರವನ್ನುಂಟು ಮಾಡುವ ವ್ಯಕ್ತಿ, ಶಕ್ತಿ ಇವರು. ಈ ಬಣ್ಣದ ಲೋಕದಿಂದ ಹೊರಬಂದ ಸ್ವಾಮಿಗಳ ನೋಟದಲ್ಲಿ 'ಆತ್ಮವಿಶ್ವಾಸ', ಏನೋ ಸಾಧಿಸಿದ ಕೃತಕೃತ್ಯತೆಯ ಧನ್ಯತೆಯ ಭಾವ. ಮೈಬಣ್ಣ ಕಪ್ಪಿದ್ದರೂ ಈ ವ್ಯಕ್ತಿಯ ನೋಟ–ಮಾಟಗಳಲ್ಲಿ ಏನೋ ಒಂದು ಬಗೆಯ ಆಕರ್ಷಣೆ. ಇನ್ನೂ ಏನೇನೋ ಸಾಧಿಸಬೇಕೆಂಬ ಚಲದ ನೋಟ ಅದಾಗಿರಬಹುದೆ ಎಂದು ಅನೇಕ ಸಲ ಯೋಚಿಸಿದ್ದೆನು!

ಕಲೆಯ ಮೂಲಕ ಸಂಸ್ಕೃತಿಯ ಉಳಿವು, ಆ ಮೂಲಕ ಸಮಾಜ ಸುಧಾರಣೆ ತಕ್ಕಮಟ್ಟಿಗಾದರೂ ಆದೀತು! ಎಂಬ ಕಳಕಳಿಯನ್ನು ಹೊಂದಿದ ಸಹೃದಯ ಸ್ವಾಮಿಗಳು ಸುದೀರ್ಘ ಜೀವನಾನುಭವಿ ಮತ್ತು ಅಷ್ಟೇ ದೀರ್ಘಾನುಭವದ ಕಲಾನುಭವಿ. ಭಕ್ತಿಪ್ರಧಾನವಾದ 'ನಿಜಗುಣ ಶಿವಯೋಗಿ' ಸಣ್ಣಾಟದಲ್ಲಿ 'ಪ್ರಮೀಳಾ' ಪಾತ್ರದ ಮೂಲಕ ಪ್ರವೇಶ ಪಡೆದು, ಆ ಪಾತ್ರದ ಎಲ್ಲ ಸಾಧ್ಯತೆಗಳನ್ನು ಅಳವಡಿಸಿಕೊಂಡು ತನ್ನದೇ ವಿಶಿಷ್ಟ ಕಲಾಭಿನಯದ ಜೀವ ತುಂಬಿ, ಗಟ್ಟಿಯಾಗಿ ನೆಲೆನಿಂತ ಹಿರಿಯ ಕಲಾವಿದ, ಗೋಕಾಕ ಪರಿಸರದ ಮೇರುನಟ. ಈ ಪಾರಂಪರಿಕ ರಂಗಕಲೆಯಲ್ಲಿ ಗಂಡಸಾದ ಸ್ವಾಮಿಗಳು ಹೆಣ್ಣಾಗಿ ಮಾತು, ಹಾಡು, ಅಭಿನಯಾದಿಗಳ ಮೂಲಕ ರಂಗವನ್ನೇರಿ ಅಬಾಲವೃದ್ಧರನ್ನೆಲ್ಲ ಮೆಚ್ಚಿಸುವ ಪ್ರಸ್ತುತ ಕಲಾಲೋಕದ ಶ್ರೇಷ್ಠ ಕಲಾವಿದ. ಭಕ್ತಿರಸಪೂರ್ಣ ಆಟದಲ್ಲಿ

ಶೃಂಗಾರದ ಮೂಲಕ ಜನಮನೋರಂಜನೆಯನ್ನುಂಟು ಮಾಡುವುದು ಸ್ವಲ್ಪ ಕಠಿಣವೆಂದೇ ಹೇಳಬೇಕು. ಇಂಥ ಪ್ರಸಂಗದಲ್ಲಿ ಎಲ್ಲ ಪ್ರೇಕ್ಷಕರನ್ನು ಶೃಂಗಾರದ ಮೂಲಕ, ಅದರಲ್ಲಿಯೂ ವೇಶ್ಯಾಶೃಂಗಾರದ ಮೂಲಕ ಗೆಲ್ಲುವುದು ಅಷ್ಟು ಸುಲಭವಲ್ಲ. ಇಂಥ ಇಕ್ಕಟ್ಟಿನ ಪಾತ್ರವನ್ನು ಎಲ್ಲರೂ ಮೆಚ್ಚಿ ತಲೆದೂಗುವಂತೆ ನಿರ್ವಹಿಸುತ್ತ ಬಂದಿರುವುದು ಸ್ವಾಮಿಗಳಲ್ಲಿರುವ ಸೂಕ್ಷ್ಮ ಕಲಾಭಿಜ್ಞತೆಯಲ್ಲದೆ ಮತ್ತೇನು? ರಂಗಾಭಿನಯದಿಂದ ನಿರಕ್ಷರ ಕುಕ್ಷಿಗಳನ್ನು ಮಾತ್ರವಲ್ಲ, ಅಕ್ಷರಸ್ಥರನ್ನೂ ಆಕರ್ಷಿಸಿದ ಉತ್ತರ ಕರ್ನಾಟಕದ ವಿರಳ ಕಲಾವಿದರಲ್ಲಿ ನಿಂಗಯ್ಯಸ್ವಾಮಿಯವರೂ ಒಬ್ಬರೆಂಬುದು ಅಭಿಮಾನದ ಸಂಗತಿ. ಸಣ್ಣಾಟದ ನಟರ ಜವಾಬ್ದಾರಿ ಮತ್ತು ಪರಿಶ್ರಮ ಬಹಳ. ಯಕ್ಷಗಾನದ ನಟರಿಗಿಂತಲೂ ಇವರಿಗೆ ಶಕ್ತಿ–ಪರಿಶ್ರಮ ಹೆಚ್ಚಿಗೆ ಬೇಕು. ಸಣ್ಣಾಟದಲ್ಲಿ ಹಾಡು, ಮಾತು ಅಭಿನಯಾದಿಗಳನ್ನು ನಟನೇ ನಿರ್ವಹಿಸಬೇಕಾಗುತ್ತದೆ. ಯಕ್ಷಗಾನದಲ್ಲಿ ನಟ ಬರೀ ಮಾತು ಅಭಿನಯ ಮಾಡಿದರೆ ಸಾಕು, ಹಾಡುವುದು ಹಿಮ್ಮೇಳದವರ ಜವಾಬ್ದಾರಿ, ಹಾಡಿಗೆ ತಕ್ಕಂತೆ ನಟ ಕುಣಿದರೆ ಸಾಕು. ಈ ಎಲ್ಲ ಜವಾಬ್ದಾರಿ ಹೊತ್ತು ತುಂಬ ಪರಿಶ್ರಮವಹಿಸಿ, ಸ್ವಾಮಿಗಳಂಥ ಕಲಾವಿದರು ಸಣ್ಣಾಟ ರಂಗಭೂಮಿಯನ್ನು ಉಳಿಸಿಕೊಂಡರು. ದೈವಾಯತ್ತ ಕಲಾಪ್ರತಿಭೆ ಹೊಂದಿರುವ ಸ್ವಾಮಿಗಳು ಈ ಆಟದಲ್ಲಿ ಪ್ರಚಂಡ ವಿಜಯವನ್ನು ಗಳಿಸಿದರು. ತುಂಬ ಶೀಘ್ರವಾಗಿಯೇ ನೋಡುಗರ ಹೃನ್ಮಂದಿರವನ್ನು ಪ್ರವೇಶಿಸಿದರು. ಪ್ರೇಕ್ಷಕರು ಸ್ವಾಮಿಗಳ ಕಲಾಪ್ರದರ್ಶನವನ್ನು ಮುಕ್ತಕಂಠದಿಂದ ಕೊಂಡಾಡತೊಡಗಿದರು. ಶ್ರೀಯುತರು ದಿನದಿಂದ ದಿನಕ್ಕೆ ಜನಪ್ರಿಯರಾಗುತ್ತ, ಹೆಸರುವಾಸಿಯಾದರು. ಹೀಗಾಗಿ, ನಿಂಗಯ್ಯ ಸ್ವಾಮಿಗಳ 'ನಿಜಗುಣ' ಆಟ ಇದೆಯೆಂದರೆ, ಸಹಸ್ರಗಟ್ಟಲೇ ಜನ ಜೇನುಹುಳು ಮುಕುರಿದಂತೆ ಮುಕುರತೊಡಗಿತು. ಕಲಾವಿದನಿಗೆ

ಇದಕ್ಕಿಂತ ಹೆಚ್ಚಿಗೆ ಇನ್ನೇನು ಬೇಕು! ಸ್ವಾಮಿಗಳ ಆನಂದಕ್ಕೆ ಪಾರವೇ ಇಲ್ಲ. ಇನ್ನಷ್ಟು ಹುರುಪು ಉತ್ಸಾಹಗಳಿಂದ ರಂಗಭೂಮಿಯ ಮೇಲೆ ಅಭಿನಯಿಸತೊಡಗಿದರು. ಸಂದರ್ಭಕ್ಕೆ ತಕ್ಕ ಪಾತ್ರಾಭಿನಯ, ತಾಳಕ್ಕೆ ತಕ್ಕ ಕುಣಿತ, ಪ್ರಸಂಗಕ್ಕನುಗುಣವಾದ ಮಾತು, ಪದಗಳಿಂದ 'ಪ್ರಮೀಳಾ' ಪಾತ್ರಧಾರಿ ಶ್ರೀ ನಿಂಗಯ್ಯಸ್ವಾಮಿಗಳು ಪ್ರೇಕ್ಷಕರನ್ನು ಬೆಳ್ಳಬೆಳತನಕ ಎವೆಹಳಚದಂತೆ ಕುಳ್ಳಿರಿಸುವರಲ್ಲದೆ, ತಾವೂ ಸಹ ತಲೆಕಿರೀಟ ಹೊತ್ತು ಗೆಜ್ಜೆಕಟ್ಟಿಕೊಂಡು, ಕೂಗಿ, ಹಾಡಿ, ಕುಣಿದು, ದಣಿದಿದ್ದರೂ ಉತ್ಸಾಹ ಉಡಗದೆ, ಹುರುಪಿನಲ್ಲಿ ಬಯಲಾಟದ ಕಥೆಯನ್ನು ಮುಂದುವರಿಸುವವರು. ನಿಂಗಯ್ಯ ಸ್ವಾಮಿಗಳ 'ಪ್ರಮೀಳಾ' ಪಾತ್ರದ ಸೊಗಸು-ಸೌಂದರ್ಯ, ಅಂದಛಂದ ವಿನ್ಯಾಸವನ್ನು ಶಬ್ದಗಳ ಮೂಲಕ ರೇಖಿಸುವುದು ಕಷ್ಟಸಾಧ್ಯ. ಅದನ್ನು ಅಟ್ಟದ ಮೇಲೆಯೇ ನೋಡಿ ಅನುಭವಿಸಿ, ಆನಂದಿಸಬೇಕು.

ಈ ಯಶಸ್ಸಿನ ವಾರ್ತೆ ಘಟಪ್ರಭೆಯ ಆಚೆಗೂ ಕೇಳಿ ಹಳ್ಳಿ-ಪಳ್ಳಿಗಳಿಂದ ಪಟ್ಟಣ-ನಗರಗಳಿಂದ ಸ್ವಾಮಿಗಳ ಆಟ ನೋಡಲು ಜನ ಹಿಂಡುಹಿಂಡಾಗಿ ಬರಲಾರಂಭಿಸಿತು. ಶ್ರೀಯುತರು ಹವ್ಯಾಸಕ್ಕಾಗಿ ಪ್ರಮೀಳಾ ಪಾತ್ರ ಆಗಾಗ್ಗೆ ನಿರ್ವಹಿಸುತ್ತ ಬಂದವರು. ಈಗ ಅದನ್ನು ಒಂದು ವೃತ್ತಿಯಾಗಿಯೇ ಕೈಗೊಂಡರೆಂದು ಹೇಳಬಹುದು. ಜನಾಗ್ರಹ ಮತ್ತು ಜನಾದರಣೆಗಳ ಮೂಲಕ 'ನಿಜಗುಣ ಶಿವಯೋಗಿ' ಆಟದ ಪ್ರಯೋಗಗಳು ಹೆಚ್ಚುತ್ತ ನಡೆದು, ಅವರೊಬ್ಬ ಹವ್ಯಾಸಿ ನಟರೆಂಬುದನ್ನು ಮರೆಯಿಸಿ, ವೃತ್ತಿನಟರೇ ಎನ್ನುವ ಭಾವನೆ ತಂದಿತು. 1949ರಿಂದ 1968ರವರೆಗೆ ಸುಮಾರು ಎರಡು ದಶಕಗಳ ಕಾಲ ಈ ಆಟದ ನಿರಂತರ ಪ್ರಯೋಗಗಳು ನಡೆದುವು. ಇದೇ ಸಂದರ್ಭದಲ್ಲಿ ನಿಂಗಯ್ಯಸ್ವಾಮಿ ಅವರ ದ್ವಿತೀಯ ಪುತ್ರ ಶ್ರೀ ಸಿದ್ಧಲಿಂಗಯ್ಯನವರು ಈ ಸಣ್ಣಾಟದ

ನಾಯಕ ಪಾತ್ರ 'ನಿಜಗುಣ ಶಿವಯೋಗಿ' ವಹಿಸಿಕೊಂಡು ಪೂರೈಸುತ್ತ ನಡೆದುದು ಅಷ್ಟೇ ಗಮನೀಯ. ನಿಜಗುಣ ಶಿವಯೋಗಿ ಪಾತ್ರಧಾರಿ ಸ್ವಂತ ಮಗನ ಮುಂದೆ ಪಾತರಗಿತ್ತಿಯ (ಪಾತಕ) ಪಾತ್ರ ನಿರ್ವಹಿಸುವುದು ಸ್ವಾಮಿಗಳಿಗೆ ಅನಿವಾರ್ಯವೆನಿಸಿದರೂ ಹೇಗಪ್ಪ ಎಂದು ಸಂಕಟಪಡಲಿಲ್ಲ; ಸಂಕೋಚಪಡಲಿಲ್ಲ. 'ನಾಚಿಕೆಗೇಚಿಕೆ ಕಳೆದೊಗೆದಾಚೆಗೆ' ಮಗ (ನಿಜಗುಣ ಪಾತ್ರಧಾರಿ) ನನ್ನು ಎದುರಿಸಿ, ಪ್ರಮೀಳಾ ಪಾತ್ರಾಭಿನಯದ ನೈಪುಣ್ಯವನ್ನು ಮೆರೆದವರು. ನಿಜಗುಣರು ಮಹಾಶಿವಯೋಗಿ, ಆಧ್ಯಾತ್ಮೀ; ಕಾಮವನ್ನು ಜಯಿಸಿದವರು. ಪ್ರಮೀಳಾ ಪಾತರದವಳು, ಒಯ್ಯಾರಿ, ವಿಲಾಸಿನಿ. ಒಂದಕ್ಕೊಂದು ತದ್ವಿರುದ್ಧ. ಮಗ ಮಹಾಯೋಗಿ ನಿಜಗುಣಿ ಜೊತೆಗೆ, ತಂದೆ ಕೀಳು ಪ್ರವೃತ್ತಿಯ ಪ್ರೇಯಸಿಯಾಗಿ ಅಭಿನಯಿಸುವುದು ಮುಜುಗರದ ಮತ್ತು ಅಷ್ಟೇ ಸ್ವಾರಸ್ಯಕರ ಪ್ರಸಂಗವೆನಿಸಿದ್ದು ನನ್ನಂಥ ಚಿಕಿತ್ಸಕನಿಗೆ. ಇಲ್ಲಿ ಪ್ರಮೀಳಾ ನಿಜಗುಣರನ್ನು ತನ್ನ ತೋಳಸೆರೆಯಲ್ಲಿ ಬಿಗಿದಪ್ಪಿಕೊಳ್ಳಲು ಪ್ರಯತ್ನಿಸುವುದು, ಆ ಸೆರೆಯಿಂದ ಬಿಡಿಸಿಕೊಳ್ಳಲು ನಿಜಗುಣರು ಒದ್ದಾಡುವುದು ಬಹು ಮೋಜಿನದಾಗಿರುತ್ತದೆ. ಈ ಸಂದರ್ಭದಲ್ಲಿ ಪ್ರೇಕ್ಷಕರಿಗೆ ಮನೋರಂಜನಪೂರಿತ ನಗೆಯೇ ನಗೆ. ಸ್ವಾಮಿಗಳು ಇಲ್ಲೆಲ್ಲ ಸಹಜಾಭಿನಯ ನೀಡುವುದರೊಂದಿಗೆ, ಮಗ ಸಿದ್ಧಲಿಂಗಯ್ಯನವರಿಗೆ ನಟನಾಭಿನಯದ ಮಾರ್ಗದರ್ಶಕರಾಗಿಯೂ ಮುನ್ನಡೆದರು.

1978ರ ತರುವಾಯದ ಸ್ವಾಮಿಯವರ ಜೀವನ ರಾಜಕೀಯದ್ದಾದರೂ (ಗೋಕಾಕ ನಗರಸಭೆಗೆ ಮೂರು ಬಾರಿ ಅಧ್ಯಕ್ಷರಾಗಿದ್ದರು) ಕಲಾಸಕ್ತರ ಒತ್ತಾಸೆಯ ಮೇರೆಗೆ ಆಗಾಗ್ಗೆ ಈ ಆಟದ 'ಪ್ರಮೀಳಾ' ಪಾತ್ರದಲ್ಲಿ ಮಿಂಚುತ್ತಲೇ ಬಂದುದು ಅವರಿಗಿರುವ ಕಲೆಯ ಮೂಲ ಒಲವು. 1980ರ ಸುಮಾರಿನಲ್ಲಿಯೂ ಪ್ರಕೃತ ಆಟದ ಅನೇಕ



ಪ್ರದರ್ಶನಗಳನ್ನು ಸೂತ್ರಧಾರ ಶ್ರೀ 'ಗಡಕರಿ' ಯವರ ಸಣ್ಣಾಟ ತಂಡದ ಮೂಲಕ ನೀಡಿದ ಕೀರ್ತಿ ಸ್ವಾಮಿಯವರದು. ಈ ಕಾಲದಲ್ಲಿಯ ಸ್ವಾಮಿಗಳ ಅಭಿನಯವನ್ನು ವೀಕ್ಷಿಸಲು ಜನಜಾತ್ರೆಯೇ ನೆರೆಯುತ್ತಿತ್ತು. ಎಲ್ಲ ವರ್ಗದ ಜನ ಸೇರಿತ್ತಿದ್ದರು; ಅದರಲ್ಲಿಯೂ ಹೆಣ್ಣು ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿರುತ್ತಿದ್ದರು. ಪ್ರೇಕ್ಷಕರ ಮೇಲೆ ಸ್ವಾಮಿಯವರಿಗೆ ವಿಶೇಷ ಪ್ರೀತಿವಿಶ್ವಾಸ. ಈ ಜನತೆಗೂ ಸ್ವಾಮಿಯವರ ಮೇಲೆ ಅಪಾರವಾದ ಪ್ರೀತಿ–ಅಭಿಮಾನ. ಶ್ರೀಯುತರು ಎಲ್ಲ ಜಾತಿಯ, ಎಲ್ಲ ವರ್ಗಗಳ ಜನರಿಗೆ ಮಾನವೀಯ ಸಂಬಂಧದ ಕೊಂಡಿಯಾಗಿ ಕಲಾಜೀವನ ಸಾಗಿಸುತ್ತ ಬಂದಿದ್ದರು. ಹೀಗಾಗಿ, ಶ್ರೀ ಸಾಮಾನ್ಯರ ಗಾಢ ಸಂಪರ್ಕ ಕಟ್ಟಿಕೊಂಡಿದ್ದರು. ಜನಗಳ ಜತೆ ಕಟ್ಟಿಕೊಂಡ ಈ ನಂಟು ಮುಂದೆ ಅವರನ್ನು ಮುನಸಿಪಾಲಿಟಿ ಸದಸ್ಯರು ಅಧ್ಯಕ್ಷರನ್ನಾಗಿ ಆಯ್ಕೆಗೊಳಿಸಲು ಪ್ರಬಲ ಕಾರಣವೂ ಆದಂತಿದೆ.

ಮಾನ್ಯ ಸ್ವಾಮಿಯವರ ನಟನಾಕಲೆಯನ್ನು ಮತ್ತು ಮಾನವೀಯ ಅಂತಃಕರಣದ ಭಾವನೆಗಳನ್ನು ಮೆಚ್ಚಿಕೊಂಡ, ಸಾಮಾನ್ಯ ಜನ ಹಾದಿ–

ಬೀದಿಯಲ್ಲಿ ಇವರ ಕಾಲಿಗೆ ಎರಗಿಯೇ ಮುಂದಡಿಯಿಡುತ್ತಿದ್ದರು. ಕೈಮುಗಿದೇ ಮುಂದೆ ಸಾಗುತ್ತಿದ್ದರು. ತಮ್ಮ ಕಲೆ ಮತ್ತು ಪ್ರೀತಿ-ವಿಶ್ವಾಸವನ್ನು, ಆತ್ಮಗೌರವವನ್ನು ಹೆಚ್ಚಿಸಿಕೊಂಡ 'ಮಾನವಪ್ರೇಮಿ' ಕಲಾವಿದರಿವರು. 'ನನ್ನ ಬದುಕಿನಲ್ಲಿ ನಾನು ಗಳಿಸಿದ ಬಹುದೊಡ್ಡ ನಿಧಿಯೆಂದರೆ ಈ ಜನಗಳೇ! ಈ ಪ್ರೇಕ್ಷಕರೇ! ಎಂದು ಸ್ವಾಮಿಗಳು ಹೆಮ್ಮೆಯಿಂದ ಹೇಳುತ್ತಿದ್ದರು.

ಪಾತ್ರಧಾರಿ ಸ್ವಾಮಿಗಳು ರಂಗಪ್ರವೇಶಿಸುವಷ್ಟರಲ್ಲಿಯೇ ಆಹೇರದ ಸುರಿಮಳೆ, ಹತ್ತು ರೂಪಾಯಿಯಿಂದ ಸಾವಿರ ರೂಪಾಯಿಯವರೆಗೆ ಕಲಾಭಿಮಾನಿಗಳು ಆಹೇರ ಮಾಡುತ್ತಿದ್ದುದುಂಟು. ಆಹೇರದ ಲೆಕ್ಕ ಇಡುವವರ್ಯಾರು! ಹಾಗಾಗಿ ಆಹೇರ (ಕಾಣಿಕೆ) ಹಾಕಿದವರೆಷ್ಟೋ! ಹೂ-ತುರಾಯಿ ಅರ್ಪಿಸಿದವರೆಷ್ಟೋ! ಚುರಮರಿ ಹಾರಿಸಿದವರೆಷ್ಟೋ! ನಾಣ್ಯನೋಟು ತಲೆಮೇಲೆ ಸುರಿವಿದವರೆಷ್ಟೋ! ವನ್ಸ್ ಮೋರ್ ಎಂದು ಕೇಕೆ ಹಾಕಿದವರೆಷ್ಟೋ! ಸಿಳ್ಳುಹೊಡೆದವರೆಷ್ಟೋ! ಚಪ್ಪಾಳೆ ತಟ್ಟಿ ಹರ್ಷೋದ್ಗಾರ ಮಾಡಿದವರೆಷ್ಟೋ! ಕೂಡಿಸಿ ಹೇಳುವುದು ಸಾಧ್ಯವೆ? ಈ ಪ್ರೀತ್ಯಾದರಗಳ ಮಹಾಪೂರವೇ ಹರಿದುಬಂದಾಗ, ಆಟ ಮುಂದುವರಿಯುವುದೇ ಕಷ್ಟವಾಗುತ್ತಿದ್ದುದನ್ನು ಸ್ವತಃ ಕಂಡಿದ್ದೇನೆ. ಆದರೆ ಈ ಗೌರವವನ್ನು ಜನಪದ ಕಲಾವಿದ, ಆಟದ ಮುನ್ನಡೆಗೆ ಆತಂಕವಾಗುತ್ತದೆಂದು ನಿರಾಕರಿಸುವಂತಿಲ್ಲ. ಆಹೇರಕ್ಕಾಗಿಯೇ ಗಂಟೆಗಟ್ಟಲೆ ವೇಳೆ ವ್ಯಯವಾದರೂ ಅವನು ಸಹಿಸಬಲ್ಲ. ಜನಪದ ಪ್ರೇಕ್ಷಕರಿಗೂ ಇದು ರೂಢಿಗತ, ಆಸ್ಥೆಯಿಂದ ನೋಡುತ್ತಾರೆ.

ಇಷ್ಟೆಲ್ಲ ಕೀರ್ತಿಗೌರವದ ಉತ್ತುಂಗಕ್ಕೇರಿದರೂ ನಿಂಗಯ್ಯ ಸ್ವಾಮಿಯವರಿಗೆ 'ನಾನು' ಎಂಬ ಅಹಮಹಮಿಕೆ ಇರಲಿಲ್ಲ.

ಸದುವಿನಯದ ತುಂಬಿದ ಕೊಡ. ಆಹೇರ ರೂಪದ ಹಣವೆಲ್ಲ ತನ್ನದಾಗಿದ್ದರೂ ಅದರಲ್ಲಿ ಒಂದಿಷ್ಟು ಭಾಗ ಶಾಲಾ ಕಟ್ಟಡ, ತನ್ನ ಓಣಿಯ ಹನುಮಂತ ದೇವರ ಗುಡಿಯ ಕಟ್ಟಡ ನಿರ್ಮಾಣಕ್ಕೆ, ಇನ್ನೊಂದಿಷ್ಟು ಭಾಗವನ್ನು ಬಡಬಗ್ಗರಿಗೆ, ಬಡವಿದ್ಯಾರ್ಥಿಗಳಿಗೆ ಸ್ವ ಇಚ್ಛೆಯಿಂದ ದಾನ ಮಾಡುತ್ತಲೇ ಬಂದುದು ಈ ಕಲಾವಿದನ ಔದಾರ್ಯ. ತನ್ನ ಸಹಕಲಾವಿದರಿಗೂ ಆಹೇರದೊಳಗೆ ಪಾಲು ಕೊಡುತ್ತಲೇ ಬಂದಿದ್ದರು. ಅವರ ಆಪತ್ಕಾಲದಲ್ಲಿ ಆರ್ಥಿಕ ಸಹಾಯವನ್ನು ನೀಡುತ್ತಲೇ ಬಂದಿದ್ದರು. ಸಹಕಲಾವಿದರನ್ನು ತನ್ನ ಕುಟುಂಬದ ಸದಸ್ಯರಂತೆಯೇ ಕಾಣುವ, ಕಿರಿಯ ಕಲಾವಿದರಿಗೆ ಮಾರ್ಗದರ್ಶನ ಈಯುವ, ಅವರ ಕಲೆಯನ್ನು ಮೆಚ್ಚಿಕೊಳ್ಳುವ ಹೃದಯವೈಶಾಲ್ಯ ಶ್ರೀಯುತರದು. ಅಷ್ಟೇ ಅಲ್ಲ! ಸ್ವಾಮಿಯವರಿಗೆ 'ಕರ್ನಾಟಕ'ದ ಬಯಲಾಟ ತಂಡಗಳ ಕಲಾವಿದರೆಲ್ಲರೂ ಬಾಂಧವರು. ಹಾಗಾಗಿ ಇನ್ನೊಬ್ಬ ಕಲಾವಿದನ ಬಗೆಗೆ ಇವರಲ್ಲಿ ದ್ವೇಷಾಸೂಯೆ, ಈರ್ಷೆ, ವೈಷಮ್ಯ, ಪ್ರತ್ಯೇಕತೆಗಳ ಭಾವನೆಯೇ ಇರಲಿಲ್ಲ. 'ಎಲ್ಲರೂ ಆಡಲಿ, ಚೆನ್ನಾಗಿ ಆಡಲಿ, ನಮ್ಮ ಕಲಾವಿದರು ಬಾಳಲಿ, ಬೆಳಗಲಿ, ಅವರ ಕಲೆ ಉಳಿಯಲಿ, ನಮ್ಮ ಸಾಂಸ್ಕೃತಿಕ ಪರಂಪರೆ ಮುಂದುವರಿಯಲಿ' ಎನ್ನುವ ಸಾತ್ವಿಕ ಸ್ವಭಾವದ ರಸಿಕ ಕಲಾವಿದ ಸ್ವಾಮಿಗಳು. ಅನೇಕ ಜನಪದ ಕಲಾವಿದರು-ಕಲೆಗಳು ಗೋಕಾಕ ಪರಿಸರದಲ್ಲಿ ತಲೆ ಎತ್ತಲು, ಬೆಳೆಯಲು ಸ್ವಾಮಿಗಳು ನೀಡಿದ ಸ್ಫೂರ್ತಿ-ಪ್ರೋತ್ಸಾಹ, ಕೊಟ್ಟ ಅವಕಾಶಗಳು ಉಲ್ಲೇಖನೀಯ.

ಪ್ರಶಸ್ತಿ-ಪುರಸ್ಕಾರ : ನಿಂಗಯ್ಯಸ್ವಾಮಿಗಳ ಸಾಧನೆಯನ್ನು ಮನಗಂಡು, ಸ್ಥಳೀಯ ಸಂಘ-ಸಂಸ್ಥೆಗಳು, ಕಲಾವಿದನಿಗೆ ಪ್ರಶಸ್ತಿ-ಪುರಸ್ಕಾರ ನೀಡಿ ಸನ್ಮಾನಿಸಿವೆ. ಇವರ ಅನುಪಮ ರಂಗಕಲಾಸೇವೆಗೆ ರಾಜ್ಯ ನಾಟಕ

ಅಕಾಡೆಮಿ ಪ್ರಶಸ್ತಿ (1984), ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ (1985) ಗಳು ಲಭಿಸಿವೆ. ಬೆಂಗಳೂರಿನ ಸರ್.ಎಂ.ವಿಶ್ವೇಶ್ವರಯ್ಯ ಪ್ರತಿಷ್ಠಾನದ ಪ್ರಶಸ್ತಿ (2002), ಬೆಳಗಾವಿ ಜಿಲ್ಲೆಯ ಸಂಘ ಸಂಸ್ಥೆಗಳು ಕೊಡಮಾಡಿದ 'ಕಲಾಶ್ರೀ', 'ನಾಟ್ಯಶ್ರೀ', 'ಕಲಾತಪಸ್ವಿ', 'ಸಮಾಜ ಸೇವಾದುರಂದರ' ಮುಂತಾದ ಪ್ರಶಸ್ತಿಗಳು ಸಂದಿವೆ. ಜಿಲ್ಲೆ-ತಾಲ್ಲೂಕುಗಳಲ್ಲಿ ಹಮ್ಮಿಕೊಳ್ಳುವ ಸ್ವಾತಂತ್ರ್ಯೋತ್ಸವ, ರಾಜ್ಯೋತ್ಸವ, ಗಣರಾಜ್ಯೋತ್ಸವ ಸಮಾರಂಭಗಳಲ್ಲಿ ಇವರಿಗೆ ಪ್ರಶಸ್ತಿಯನ್ನಿತ್ತು ಗೌರವಿಸಲಾಗಿದೆ. ತಿಂಗಳಿಗೆ ನೂರೈವತ್ತು ರೂಪಾಯಿ ಮಾಸಾಶನ ಕೂಡ ಇವರಿಗಿದೆ. ಆದರೂ ಜನತೆಯ ಪುರಸ್ಕಾರ-ಪ್ರೋತ್ಸಾಹದ ಮುಂದೆ ಸರಕಾರದ ಪ್ರಶಸ್ತಿ-ಪುರಸ್ಕಾರ ಗೌಣ ಎನ್ನುತ್ತಿದ್ದರು ಸ್ವಾಮೀಜಿ.

ಪ್ರಸ್ತುತ ಕಲಾವಿದರಿಗೆ ಕೇಳುವ, ನೋಡುವ ಸಹೃದಯ ಪ್ರೇಕ್ಷಕರು ದೊರೆತರೆ ಸಾಕು ತಮ್ಮ 75ರ ಇಳಿವಯಸ್ಸಿನಲ್ಲಿಯೂ ಮೂವತ್ತರ ಹರೆಯದ ಹುಡುಗಾಟದ ಪಾತರದ ಹುಡುಗಿಯಾಗಿಯೇ ರಂಗಭೂಮಿಯ ಮೇಲೆ ಮಿಂಚಿದ್ದು ಕಣ್ಣಿಗೆ ಕಟ್ಟಿದಂತಾಗಿದೆ; ಟನ್ನನೇ ಜಿಗಿದೇ ರಂಗಪ್ರವೇಶಿಸುತ್ತಿದ್ದರು. ಕಲಾಜೀವನದಲ್ಲಿ ಮುಪ್ಪರಿಯದ ಈ ಹಿರಿಯ ಜೀವಿ 28-11-2006ರಂದು ಲಿಂಗೈಕ್ಯರಾದುದು ಜನಪದ ರಂಗಭೂಮಿಗೆ ತುಂಬಿಬಾರದ ನಷ್ಟವಾಯಿತು.

ಒಟ್ಟಿನಲ್ಲಿ ಶ್ರೀ ನಿಂಗಯ್ಯ ಸ್ವಾಮಿ ಪೂಜಾರಿ ಅವರು ತಮ್ಮ 25ನೇ ವಯಸ್ಸಿನಲ್ಲಿ (1949) ಶ್ರೀ ಸಣ್ಣಪ್ಪ ಗಡಕರಿ ಅವರ ತಂಡದ 'ನಿಜಗುಣ ಶಿವಯೋಗಿ' 'ಸಣ್ಣಾಟ' ದಲ್ಲಿ 'ಪ್ರಮೀಳಾ' ಪಾತ್ರದ ಮೂಲಕ ಪ್ರವೇಶ ಪಡೆದು, ತಮ್ಮ 75ನೇ ವಯಸ್ಸಿನವರೆಗೂ ಅದನ್ನು ಅನೂಚಾನವಾಗಿ ಮುನ್ನಡೆಸಿಕೊಂಡು ಬಂದುದು, ಗೋಕಾಕ ನಾಡವರಿಗೆ

ಅಭಿಮಾನದ ಸಂಗತಿ. ಕಳೆದ ಐದು ದಶಕಗಳಿಂದ ಈ ಕಲಾವಿದರು 'ಪ್ರಮೀಳಾ' ಪಾತ್ರದ ಮೂಲಕ, ಉತ್ತರ ಕರ್ನಾಟಕದ ಸಣ್ಣಾಟ ಜನಪದ ರಂಗಭೂಮಿಗೆ ತನ್ನದೇ ವಿಶಿಷ್ಟ ಕೊಡುಗೆಯನ್ನು ಈ ರೀತಿ ನೀಡಿದುದು ಶ್ಲಾಘನೀಯ, ಸ್ಮರಣಾರ್ಹ. ತಮಗೆ ಎಪ್ಪತ್ತೈದು ತುಂಬಿದ ಸಂದರ್ಭದಷ್ಟೊತ್ತಿಗೆ ದುರ್ದೈವವಶಾತ್ ಅವರ ಮಗ ಸಿದ್ಧಲಿಂಗಯ್ಯ ಹೃದಯಾಘಾತದಿಂದ ಶಿವಾಧೀನರಾದರು. ಅವರು ಮಾಡುತ್ತ ಬಂದ 'ನಿಜಗುಣಿ' ಪಾತ್ರ ಮಾಡಲು ಯಾರೂ ಮುಂದೆ ಬಾರದಿದ್ದಾಗ, ಸ್ವಾಮಿಗಳ ಅಭಿನಯ ಕೂಡ ಇಲ್ಲಿಗೆ ನಿಂತಿತು.

ಕರ್ನಾಟಕ-ಮಹಾರಾಷ್ಟ್ರ ಭಾಗಗಳಲ್ಲಿ ನಿಜಗುಣಶಿವಯೋಗಿ ಬಯಲಾಟದ ಸುಮಾರು ಐದು ಸಾವಿರ ಪ್ರಯೋಗಗಳನ್ನು ಮಾಡಿ ದಾಖಲೆ ಸೃಷ್ಟಿಸಿದ ಶ್ರೇಯಸ್ಸು ಸ್ವಾಮಿಯವರದು. ಮುಖ್ಯ ಮಂತ್ರಿಗಳಾಗಿದ್ದ ವೀರೇಂದ್ರ ಪಾಟೀಲ, ರಾಮಕೃಷ್ಣ ಹೆಗಡೆ, ಎಸ್.ಆರ್. ಬೊಮ್ಮಾಯಿಯವರು ಇವರ ಆಟವನ್ನು ನೋಡಿ ಮೆಚ್ಚಿಕೊಂಡ ಆಪ್ತರು. ಉಪಮುಖ್ಯಮಂತ್ರಿಗಳಾಗಿದ್ದ ಎಂ.ಪಿ. ಪ್ರಕಾಶ್, ಕವಿ-ನಾಟಕಕಾರ ಚಂದ್ರಶೇಖರ ಕಂಬಾರ, ಜಾನಪದ ತಜ್ಞ, ನಾಡೋಜ ಎಚ್.ಎಲ್. ನಾಗೇಗೌಡ ಮೊದಲಾದ ಸಾಹಿತಿಗಳು ಇವರಿಗೆ ಆತ್ಮೀಯರಾಗಿದ್ದರು.

ಜಾನಪದ ಕನಸುಗಾರ : ಗೋಕಾಕ ನಗರದ ಹೊರವಲಯದ ಘಟಪ್ರಭಾ ಮತ್ತು ಮಾರ್ಕಂಡೇಯ ನದಿಗಳು 'ಕೂಡಲ ಸಂಗಮ' ದ ಪವಿತ್ರ ಸ್ಥಳದ ಎಂಟ್ಹತ್ತು ಎಕರೆ ಜಮೀನಿನಲ್ಲಿ ಸ್ವಾಮಿಯವರು 'ಧ್ಯಾನ ಮಂದಿರ-ಆಧ್ಯಾತ್ಮ ಕೇಂದ್ರವನ್ನು ತೆರೆಯಬೇಕು. ಅಲ್ಲಿ ಭಾರತೀಯ ಸಂಸ್ಕೃತಿ, ವೈದಿಕ ಸಂಸ್ಕೃತಿಯ ಚಿಂತನೆ, ನಿರಂತರ ದಾಸೋಹ, ಆಧ್ಯಾತ್ಮ

ಚಿಂತನೆ–ಪ್ರವಚನ ಕಾರ್ಯಕ್ರಮಗಳು ನಿತ್ಯ ನಡೆಯಬೇಕು; ಕನ್ನಡ ನಾಡು–ನುಡಿ, ಸಂಸ್ಕೃತಿ–ಸಾಹಿತ್ಯ, ಕಲೆ–ಜನಪದ ಕಲೆ–ಕಲಾವಿದರ ಕುರಿತ ಚರ್ಚೆ, ನಾಟಕೋತ್ಸವ, ವಿಚಾರ ಸಂಕಿರಣಗಳು ನಡೆಯುವಂತಾಗಬೇಕು, ಅವುಗಳ ಉಳಿವಿಕೆಗಾಗಿಯೇ ಆಧ್ಯಾತ್ಮಕೇಂದ್ರದಲ್ಲಿ ಹೆಚ್ಚಿನ ಒತ್ತು ಕೊಡಬೇಕೆನ್ನುವ ಆಸೆ–ಕನಸು ಇಟ್ಟುಕೊಂಡು, ಆ ನಿಟ್ಟಿನಲ್ಲಿ ಸ್ವಾಮಿಗಳು ಕಾರ್ಯ ಸುರುಮಾಡಿದ್ದರಾದರೂ ಪೂರ್ತಿಗೊಳಿಸಲಾಗಲಿಲ್ಲ. ಯಾರಿಗೂ ಹೇಳದೆ ಕೇಳದೆ ಬಾರದ ಲೋಕಕ್ಕೆ ಹೋಗಿಬಿಟ್ಟರು.

ತಮ್ಮ ತರುವಾಯ 'ನಿಜಗುಣ ಆಟದ ಪ್ರದರ್ಶನ' ಮುಂದುವರಿಯಬೇಕೆನ್ನುವ ಆಸೆ ಹೊತ್ತ ಸ್ವಾಮೀಜಿ ತಮ್ಮ ಮೊಮ್ಮಗ ಮಹಾಂತೇಶನಿಗೆ, ತಮ್ಮೆಲ್ಲ ಕಲಾಭಿನಯವನ್ನು ಧಾರೆಯೆರೆದರು; ಜತೆಗೆ ಕಿರಿಯರಿಗೆ ಕಲಾಭಿನಯದ ತರಬೇತಿ ಕೂಡ ನೀಡಿದರು. 'ನಿಜಗುಣಿ' ಡಪ್ಪಿನಾಟದ ರಂಗ ಪ್ರಯೋಗ ಮೂಲ ಸಂಪ್ರದಾಯಿಕ ನೆಲೆಯಲ್ಲಿಯೇ ನಡೆಯಬೇಕು. 'ಹಾಡು, ಕುಣಿತ, ಮಾತು, ವೇಷಭೂಷಣ, ಅಭಿನಯ, ವಾದ್ಯಪರಿಕರಗಳಲ್ಲಿ ಬದಲಾವಣೆ ಬೇಡ, ಬೇಕಿದ್ದರೆ ತಪ್ಪುಗಳಿದ್ದಲ್ಲಿ ತಿದ್ದಿಕೊಳ್ಳಿ, ಸುಧಾರಿಸಿಕೊಳ್ಳಿ, ಆ ನೆಪದಲ್ಲಿ ಮೂಲವನ್ನು ಕೆಡಿಸಬೇಡಿ' ಎಂಬಂಥ ಎಚ್ಚರಿಕೆಯ ಮಾತುಗಳನ್ನು ಕಲಾವಿದರಿಗೆ ಹೇಳುತ್ತಿದ್ದರು. ಅಂಥ ಕಲಾವಿದರನ್ನು ಸಜ್ಜುಗೊಳಿಸಿದರು. ಈಶ್ವರ ಚಂದ್ರ ಬೆಟಗೇರಿ, ಲಕ್ಷ್ಮಣ ಅಂಬಿ, ಬಸವರಾಜ ತೊರಗಲ್ಲ, ಲಕ್ಷ್ಮಣ ಬೇರಗಾಳೆ, ಕೃಷ್ಣ ಮುತ್ನಾಳ, ಯಲ್ಲಪ್ಪ ಅಂಬಿ, ಸಿದ್ಧಪ್ಪ ಮುತ್ನಾಳ, ಬಾಳಪ್ಪ ಅಂಬಿ, ಲಕ್ಷ್ಮಣ ಪೂಜೇರಿ, ಮಹಾದೇವಿ ಅಂಗಡಿ, ಶ್ರೀಮತಿ ಕದಮ್ ಮೊದಲಾದ ನಗರದ ಕಲಾವಿದ ಶಿಷ್ಯರಿಗೆ ಪಾರಂಪರಿಕ ಆಟವನ್ನು ಕಲಿಸಿದರು.

ಸುತ್ತಲಿನ ಹಳ್ಳಿಗಳಲ್ಲಿಯೂ ಅವರ ಹಲವಾರು ಶಿಷ್ಯರಿದ್ದಾರೆ. ಇವರೆಲ್ಲ ಅವರ ಆಟದ ಪರಂಪರೆಯನ್ನು ಮುಂದುವರಿಸಿದ್ದಾರೆ. ಸ್ವಾಮಿಗಳ ಕನಸು ನನಸಾದಂತಿದೆ.

ಸ್ಮರಣೆ–ಗೌರವ : ಸ್ವಾಮಿಗಳದು ಒಂದರ್ಥದಲ್ಲಿ ಜನಪದ ಕಲಾವಿದರ ಮನೆತನವೇ. ಕಳೆದ ಹತ್ತಾರು ವರುಷಗಳಿಂದ ರಾಜ್ಯ ಜೆ.ಡಿ.ಎಸ್. ಜಿಲ್ಲಾಧ್ಯಕ್ಷರಾದ ಶ್ರೀ ಅಶೋಕ (ಇವರ ಐದನೇ ಪುತ್ರ) ಕೂಡ 'ಸ್ತ್ರೀರತ್ನ' ನಾಟಕದಲ್ಲಿ ಬಾಲಕಲಾವಿದರಾಗಿದ್ದುದುಂಟು. ಜನಪದ ಕಲೆ–ಸಾಹಿತ್ಯ–ಸಂಸ್ಕೃತಿ ಪ್ರಿಯರಲ್ಲದೆ ಸಂಘಟಿಕರಾಗಿಯೂ ಇವರು ಅನುಪಮ ಸೇವೆ ಸಲ್ಲಿಸುತ್ತ ಬಂದಿದ್ದಾರೆ. ಸ್ವಾಮಿಗಳು ಬದುಕಿರುವಾಗಲೇ ನಾಡಹಬ್ಬ–ನುಡಿಹಬ್ಬ–ನಾಟಕೋತ್ಸವ–ಜನಪದ ಕಲೋತ್ಸವಗಳನ್ನು ಅದ್ಭುತವಾಗಿ ಸಂಘಟಿಸಿ, ಸ್ವಾಮಿಗಳಿಂದ 'ಸೈ' ಎನ್ನಿಸಿಕೊಡವರು. ಈಗ 'ಅಶೋಕ ಪೂಜಾರಿ' ಅವರು ತಮ್ಮ ತಂದೆಯವರ ಕನಸುಗಳನ್ನು ನನಸಾಗಿಸುವ ಮಹಾಮಣಿಹವನ್ನೇ ಹೊತ್ತಿದ್ದಾರೆ.

ಸ್ವಾಮಿಗಳು ಕನಸು ಕಂಡ 'ಧ್ಯಾನ ಮಂದಿರ–ಆಧ್ಯಾತ್ಮಕೇಂದ್ರ' ವನ್ನು ಅವರು ಇಷ್ಟಪಟ್ಟ ಸ್ಥಳದಲ್ಲಿಯೇ ತೆರೆದು 2007, ನವೆಂಬರ್ 26 ರಂದು ಉದ್ಘಾಟಿಸಿದ ಶ್ರೇಯಸ್ಸು ಅಶೋಕ ಅವರದು. ಇದರ ಧರ್ಮದರ್ಶಿ ಶ್ರೀಮತಿ–ಸುವರ್ಣ ಹೊಸಮಠ, ಕಾರ್ಯದರ್ಶಿ ಸಂಜೀವ ಅಶೋಕ ಪೂಜಾರಿ ಅವರುಗಳು. ಧ್ಯಾನಮಂದಿರ ಆಧ್ಯಾತ್ಮಕೇಂದ್ರದಲ್ಲಿ ಪ್ರತಿದಿನ ಆಧ್ಯಾತ್ಮ ಚಿಂತನೆ–ಪ್ರವಚನ–ಭಜನ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ಈ ಸ್ಥಳಕ್ಕೆ "ಶ್ರೀ ಕೂಡಲ ಸಂಗಮೇಶ್ವರ ಸುಕ್ಷೇತ್ರ ಸಂಗಮ ನಗರ, ಗೋಕಾಕ' ಎಂದು ಹೆಸರಿಸಲಾಗಿದೆ.

ಇದೇ ಸಂದರ್ಭದಲ್ಲಿ 'ಕಲಾಶ್ರೀ ನಿಂಗಯ್ಯ ಸ್ವಾಮಿ ಪೂಜಾರಿ ಪ್ರತಿಷ್ಠಾನ' ಸ್ಥಾಪಿಸಲಾಗಿದೆ. ಇದನ್ನು 'ನಿಂಪು ಪ್ರತಿಷ್ಠಾನ' ಎಂದೂ ಕರೆಯಲಾಗುತ್ತಿದೆ. 'ನೀನಾಸಂ' ಮದರಿಯ ಅಭಿವೃದ್ಧಿ-ಪ್ರಚಾರ, ಕಲಾವಿದರ ಸಂಘಟನೆ-ಅವರನ್ನು ಬೆಳಕಿಗೆ ತರುವುದು-ಹೊಸ ಹೊಸ ನಾಟಕಗಳ ಉತ್ಸವ ಏರ್ಪಡಿಸುವುದು ಇತ್ಯಾದಿ ಧ್ಯೇಯೋದ್ದೇಶ ಹೊಂದಿ ಈಗಾಗಲೇ ಕಾರ್ಯಪ್ರವೃತ್ತರಾಗಿದ್ದಾರೆ (2007). ಇದರ ಆಶ್ರಯದಲ್ಲಿ ಆಧ್ಯಾತ್ಮಕೇಂದ್ರದಲ್ಲಿ ಪ್ರತಿವರುಷ ಮೂರು ದಿನದ ಅದ್ದೂರಿ ಕಲೆ-ಸಾಂಸ್ಕೃತಿಕೋತ್ಸವ ಸುರುಮಾಡಿದ್ದಾರೆ. ಈ ಸಂದರ್ಭದಲ್ಲಿ ಉಪನ್ಯಾಸ, ಕಲಾಪ್ರದರ್ಶನಗಳಲ್ಲದೆ, ಕಲಾಕ್ಷೇತ್ರದಲ್ಲಿ, ಇತರ ಕ್ಷೇತ್ರಗಳಲ್ಲಿ ಅದ್ವಿತೀಯ ಸಾಧನೆಗೈದವರಿಗೆ ಸನ್ಮಾನ(ಐವರಿಗೆ), ಇಬ್ಬರಿಗೆ ಮರಣೋತ್ತರ ಪ್ರಶಸ್ತಿ ಗೌರವ ಇತ್ಯಾದಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಯಶಸ್ವಿಗೊಳಿಸಿದ್ದಾರೆ. ಈ ಪ್ರತಿಷ್ಠಾನದ ಮೂಲಕ ಜಾನಪದ ಕಲಾವಿದರಿಗೆ ಕಲೆಗಳಿಗೆ ಆದ್ಯತೆ ನೀಡಲಾಗುತ್ತಿದೆ. ನಿಂಗಯ್ಯ ಸ್ವಾಮಿಗಳವರ ಸ್ಮರಣಾರ್ಥವಾಗಿಯೇ ಈ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವರಿಗೆ ಗೌರವ ಸಲ್ಲಿಸಲಾಗುತ್ತಿದೆ. ಅವರ ಸ್ಮಾರಕವನ್ನು ಮಾಡುವ ವಿಚಾರ ಪ್ರತಿಷ್ಠಾನಕ್ಕಿದೆ. ಧ್ಯಾನಮಂದಿರದಲ್ಲಿ ನಿತ್ಯದಾಸೋಹ ನಡೆಸುವ ವಿಚಾರವೂ ಪ್ರತಿಷ್ಠಾನದವರಲ್ಲಿದೆ. ಇನ್ನೂ ಹತ್ತಾರು ಯೋಜನೆಗಳನ್ನು ಹಾಕಿಕೊಂಡ ಪ್ರತಿಷ್ಠಾನ, ಸುಮಾರು ಎರಡು ಕೋಟಿ ರೂಪಾಯಿ ಪ್ರಾಜೆಕ್ಟ್‌ವೊಂದನ್ನು ಸಿದ್ಧಪಡಿಸಿದೆ. ಪ್ರತಿಷ್ಠಾನದ ಅಧಿಕಾರವರ್ಗ ಸಾಹಿತಿ-ಕಲಾವಿದರು, ಅಧ್ಯಾಪಕರಿದ್ದರೂ ಕೂಡ, ಶ್ರೀ ಅಶೋಕ ಅವರದೇ ನೇತೃತ್ವ, ಮಾರ್ಗದರ್ಶನ. ಜನಪದ ರಂಗಭೂಮಿಯ ತರಬೇತಿ ಶಾಲೆ ತೆರೆದು, ಅದರ ಮೂಲಕ ಕಲಾತಂಡಗಳನ್ನು ರಚಿಸಿ, ರಾಜ್ಯಾದ್ಯಂತ ಡಪ್ಪಿನಾಟವನ್ನು

ಪ್ರದರ್ಶಿಸುವುದು-ಯೋಜನೆಗಳಲ್ಲಿ ಮುಖ್ಯವಾದುದೆನ್ನಲಾಗುತ್ತಿದೆ. ಇವೆಲ್ಲವೂ ನಿಂಗಯ್ಯ ಸ್ವಾಮಿಗಳವರ ಕನಸುಗಳೇ ಆಗಿದ್ದವೆಂದು ಅಶೋಕ ಹೇಳುತ್ತಾರೆ. ಸರಕಾರದ-ಸಂಘ-ಸಂಸ್ಥೆಯ ಯಾವ ನೆರವಿಲ್ಲದೆಯೂ 'ಪ್ರತಿಷ್ಠಾನ' ಈ ಕಾರ್ಯಯೋಜನೆಗಳನ್ನು ಕೈಗೆತ್ತಿಕೊಂಡು ಯಶಸ್ವಿಗೊಳಿಸುವುದರೊಂದಿಗೆ ಕಲಾಶ್ರೀ ನಿಂಗಯ್ಯ ಸ್ವಾಮಿ ಅವರಿಗೆ ಗೌರವಸಲ್ಲಿಸಲಾಗುವುದೆಂದು ಉತ್ಸಾಹದಿಂದ ನುಡಿಯುತ್ತಾರೆ.

ಸ್ವಾಮಿಗಳವರ ಮಗಳ ಮಗ, ಮಹಾಂತೇಶ ಬಯಲಾಟದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತಿದ್ದಾನೆ. ಕಿರಿಯರ ತಂಡವನ್ನು ಕಟ್ಟಿದ್ದಾನೆ. ಅವರ ಜನಪದ ರಂಗಕಲೆಗೆ ಜೀವಕಳೆಯನ್ನು ತರುವ ಎಲ್ಲ ಸಿದ್ಧತೆ ಮಾಡಿಕೊಂಡಿದ್ದಾನೆ.

ಒಟ್ಟಿನಲ್ಲಿ ಶ್ರೀ ನಿಂಗಯ್ಯಸ್ವಾಮಿ ಪೂಜಾರಿ ಅವರು ತಮ್ಮ 75ನೇ ವಯಸ್ಸಿನಲ್ಲಿ (1949) ಶ್ರೀ ಸಣ್ಣಪ್ಪ ಗಡಕರಿ ಅವರ 'ನಿಜಗುಣ ಶಿವಯೋಗಿ' ಸಣ್ಣಾಟದಲ್ಲಿ 'ಪ್ರಮೀಳಾ' ಪಾತ್ರದ ಮೂಲಕ ಪ್ರವೇಶ ಪಡೆದು, ತಮ್ಮ ಬಾಳಸಂಜೆಯವರೆಗೂ ಅದನ್ನು ಅನುಚಾನವಾಗಿ ಮುನ್ನಡೆಸಿಕೊಂಡು ಬಂದುದು ಗೋಕಾಕ ನಾಡವರಿಗೆ ಅಭಿಮಾನದ ಸಂಗತಿ. ಕಳೆದ ಐದು ದಶಕಗಳಿಂದ, ಜನಪದ ರಂಗಭೂಮಿಯ ಈ ಕಲಾವಿದರು ಉತ್ತರ ಕರ್ನಾಟಕದ ಜನಪದ ರಂಗಭೂಮಿಗೆ ತಮ್ಮದೇ ವಿಶಿಷ್ಟಕೊಡುಗೆಯನ್ನು ಈ ಮೂಲಕ, ಈ ರೀತಿ ನೀಡಿದುದು ಶ್ಲಾಘನೀಯ, ಸ್ಮರಣಾರ್ಹ.

ನಿಂಗಯ್ಯ ಸ್ವಾಮಿ ಪೂಜಾರಿ

ಗೋಕಾಕ ನಾಡಿನಲ್ಲಿ ನಿಜಗುಣಿ ಶಿವಯೋಗಿ ಡಪ್ಪಿನಾಟ ರಂಗಭೂಮಿ ನಾಟಕ ಕಲೆಯನ್ನು ಜೀವಂತಗೊಳಿಸಿ ಪೋಷಿಸಿ ಪ್ರಚಾರಕ್ಕೆ ತಂದವರು ನಿಂಗಯ್ಯ ಸ್ವಾಮಿ ಪೂಜಾರಿ ಅವರು. ನಿಜಗುಣಿ ಶಿವಯೋಗಿ ನಾಟಕದಲ್ಲಿ ಪ್ರಮೀಳಾ ಪಾತ್ರವನ್ನು ಅನುಪಮವಾಗಿ ಅಭಿನಯಿಸಿ ನೋಡುಗರ ಮನಸ್ಸಿನಲ್ಲಿ ಅಮರತ್ವ ಪಡೆದ ಅನನ್ಯ ಜನಪದ ಕಲಾವಿದರು. ಐದು ದಶಕಗಳ ಕಾಲ ನಿರಂತರವಾಗಿ ಸಾವಿರಾರು ಪ್ರದರ್ಶನಗಳಲ್ಲಿ ಅಭಿನಯಿಸಿ ಮನೆಮಾತಾದವರು. ಪಾರಂಪರಿಕ ಡಪ್ಪಿನಾಟ ಕಲೆಯನ್ನು ಮೂಲ ಆಶಯಕ್ಕೆ ಧಕ್ಕೆ ಬರದಂತೆ ಉಳಿಸಿ ಬೆಳೆಸಿದ್ದಲ್ಲದೆ, ಅದೇ ರೀತಿ ಮುಂದುವರಿಸುವ ಶಿಷ್ಯಸಮೂಹವನ್ನು ತಯಾರುಮಾಡಿದವರು. ಅವರ ಸ್ತ್ರೀಪಾತ್ರಾಭಿನಯ ಅಸ್ಮಿತೆಯಿಂದ ಕೂಡಿದ್ದು; ಅವರ ಜನಪದ ಕಲಾನಿಷ್ಠೆ ಅನುಕರಣೀಯವಾದದ್ದು.

ನಿಂಗಯ್ಯ ಸ್ವಾಮಿ ಪೂಜಾರಿಯವರು ಜನಪದ ಕಲಾವಿದರಾಗಿ ಪ್ರಸಿದ್ಧರಾಗಿದ್ದುದರ ಜೊತೆಗೆ ಸಮಾಜಸೇವೆಯಲ್ಲೂ ರಾಜಕೀಯದಲ್ಲೂ ಹೆಸರಾಗಿದ್ದರು. ಅಂಥ ಅಪರೂಪದ ಜನಪದ ಕಲಾವಿದರ ಪರಿಚಯವನ್ನು ಡಾ. ಸಿ.ಕೆ. ನಾವಲಗಿಯವರು ತನ್ಮಯರಾಗಿ ರೂಪಿಸಿದ್ದಾರೆ.

ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು

ಜಾನಪದ ಸಿರಿಭುವನ ನಂ. ೧, ಜಲದರ್ಶಿನಿ ಬಡಾವಣೆ,
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ, ಹೊಸ ಬಿ.ಇ.ಎಲ್. ರಸ್ತೆ,
ಬೆಂಗಳೂರು-೫೬೦ ೦೫೪